
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಅಹಮದಾಬಾದ್‌ನಲ್ಲಿ ಸೋಮವಾರ ಗುಜರಾತ್ ಟೈಟನ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಶತಕ ಗಳಿಸಿದ ಮುಂಬೈ ಇಂಡಿಯನ್ಸ್ ತಂಡದ ತಿಲಕ್ ವರ್ಮಾ...

21 ಏಪ್ರಿಲ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 42 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಈ ಕೃಷ್ಣ ಸುಂದರಿ ಮುಂದೆ ವಿಶ್ವ ಸುಂದರಿಯರೂ ಫೇಲ್! » 2


ಬಸವಣ್ಣ ಸಮಾನತೆ ಸಾರಿದ ಮಹಾನ್ ನಾಯಕ » 3


ಮುಸ್ಲಿಮರ ಕಡೆಗಣನೆ ಸಹಿಸುವುದಿಲ್ಲ » 4

# ಶಾಂತಿ ಮಾತುಕತೆ ಸಾಧ್ಯವಿಲ್ಲ: ಇರಾನ್

## ಅಮೇರಿಕಾ ದ್ವಂದ್ವ ನಿಲುವೆಂದು ಕಿಡಿ | ರಾಜತಾಂತ್ರಿಕ ಬಿಕ್ಕಟ್ಟು ಮತ್ತಷ್ಟು ಗಂಭೀರ

• ಪ್ರಜೋದಯ ವರದಿ

**ನವದೆಹಲಿ:** ಅಮೇರಿಕಾ ಮತ್ತು ಇರಾನ್ ನಡುವಿನ ರಾಜತಾಂತ್ರಿಕ ಬಿಕ್ಕಟ್ಟು ಮತ್ತಷ್ಟು ಗಂಭೀರ ಹಂತಕ್ಕೆ ತಲುಪಿದ್ದು, ಎರಡನೇ ಹಂತದ ಮಾತುಕತೆ ಸಾಧ್ಯವಿಲ್ಲ ಎಂದು ಇರಾನ್ ಅಧಿಕೃತವಾಗಿ ನಿರಾಕರಿಸಿದೆ.

ಅಮೇರಿಕಾ ಅತಿಯಾದ ಬೇಡಿಕೆಗಳು, ನಿರಂತರ ಆರೋಪ ಮತ್ತು ದ್ವಂದ್ವ ನಿಲುವು ತೋರಿ ಸುತ್ತಿದೆ. ಈ ಕಾರಣಗಳಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಯಾವುದೇ ಅರ್ಥಪೂರ್ಣ ಶಾಂತಿ ಮಾತುಕತೆ ಸಾಧ್ಯವಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ. ಅಮೇರಿಕಾ ಒಂದೆಡೆ ಶಾಂತಿ ಮಾತುಗಳನ್ನು ಮುಂದುವರಿಸುತ್ತಿದ್ದರೂ, ಮತ್ತೊಂದೆಡೆ ಸೇನಾ ಒತ್ತಡ, ನೌಕಾ ನಿರ್ಬಂಧ ಮತ್ತು ಆರ್ಥಿಕ ದಂಡನೆಗಳನ್ನು ಹೆಚ್ಚಿಸುತ್ತಿದೆ. ಈ ದ್ವಂದ್ವ ನಿಲುವುಗಳಿಂದ ವಿಶ್ವಾಸ ನಿರ್ಮಾಣ ಸಂಪೂರ್ಣವಾಗಿ ಕುಸಿಯುತ್ತಿದೆ ಎಂದು ಆರೋಪಿಸಿದೆ. ಶಾಂತಿ ಮಾತುಕತೆಗಳ ಮೂಲ ಉದ್ದೇಶವನ್ನು ಅಮೇರಿಕಾ ಹಾಳುಮಾಡುತ್ತಿದೆಂದು ಕಿಡಿಕಾರಿದೆ.

**ಒತ್ತಡದ ರಾಜತಾಂತ್ರಿಕತೆ**

ಅಮೇರಿಕಾದ ನಿಲುವನ್ನು ಒತ್ತಡದ ರಾಜತಾಂತ್ರಿಕತೆ ಮತ್ತು ರಾಜಕೀಯ ಬಲಪ್ರಯೋಗ ಎಂದು ಇರಾನ್ ಕರೆದಿದೆ. ಮಾತುಕತೆಗಳ ಬದಲು ಭಯ, ಆರ್ಥಿಕ ನಿರ್ಬಂಧ ಮತ್ತು ಸೈನಿಕ ತಾಕೀತುಗಳ ಮೂಲಕ ಒಪ್ಪಂದಕ್ಕೆ ಒತ್ತಾಯಿಸಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಯಾವುದೇ ಸಮತೋಲನದ ಒಪ್ಪಂದ ಸಾಧ್ಯವಿಲ್ಲ. ಈ ನಿರ್ಧಾರವು ಮಧ್ಯಪ್ರಾಚ್ಯದ ಈಗಾಗಲೇ ಅಸ್ಥಿರ ವಾಗಿರುವ ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸಿದೆ.

ಹೊರ್ಮುಜ್ ಜಲಸಂಧಿ ಸುತ್ತಲಿನ ಉದ್ವಿಗ್ನತೆ ಈಗಾಗಲೇ ಜಾಗತಿಕ ಗಮನ ಸೆಳೆದಿದ್ದು, ಅಮೇರಿಕಾ ಮತ್ತು ಇರಾನ್ ನೌಕಾಪಡೆಗಳ ನಡುವೆ ಹೆಚ್ಚುತ್ತಿರುವ ಸಂಘರ್ಷ ಪರಿಸ್ಥಿತಿ ಆತಂಕ ವನ್ನು ಹೆಚ್ಚಿಸಿದೆ. ಇತ್ತೀಚೆಗೆ ಅಮೇರಿಕಾ ಇರಾನ್ ಧ್ವಜದ ಹಡಗನ್ನು ವಶಪಡಿಸಿಕೊಂಡ ಘಟನೆ ನಂತರ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ.

**ಹಡಗು ಸಂಚಾರಕ್ಕೂ ಅಡಚಣೆ**

ಈ ಬೆಳವಣಿಗೆಗಳ ಮಧ್ಯೆ ಹೊರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗು ಸಂಚಾರಕ್ಕೂ ದೊಡ್ಡ ಅಡಚಣೆ ಉಂಟಾಗಿದೆ. ಅನೇಕ ಹಡಗುಗಳು ಮಾರ್ಗ ಬದಲಾಯಿಸುತ್ತಿವೆ. ಇದು ಜಗತ್ತಿನ ತೈಲ ಸರಬರಾಜಿಗೆ ನೇರ ಪರಿಣಾಮ ಬೀರುತ್ತಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯ ಆತಂಕ ಹೆಚ್ಚಾಗಿದೆ.

ಇರಾನ್ ನಾಯಕರು ತಮ್ಮ ನಿಲುವನ್ನು ಮತ್ತಷ್ಟು ಗಟ್ಟಿಗೊಳಿಸಿದ್ದು, ಅಮೇರಿಕಾ ತನ್ನ ನೌಕಾ ಮತ್ತು ಆರ್ಥಿಕ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳುವವರೆಗೆ ಯಾವುದೇ ಮಾತುಕತೆ ಸಾಧ್ಯ ವಿಲ್ಲವೆಂದು ಹೇಳಿದ್ದಾರೆ.

ಶಾಂತಿ ಮಾತುಕತೆಗಳು ನಡೆಯಬೇಕಿದ್ದ ಸ್ಥಳಗಳ ಬಗ್ಗೆ ಕೂಡ ಅನಿಶ್ಚಿತತೆ ಇದೆ. ಪಾಕಿಸ್ತಾನದಲ್ಲಿ ನಡೆಯಬೇಕಿದ್ದ ಸಂಭಾವ್ಯ ಸಭೆ ಇನ್ನೂ ದೃಢೀಕರಿಸಲ್ಪಟ್ಟಿಲ್ಲ. ರಾಜತಾಂತ್ರಿಕ ವಲಯಗಳು ಈ ಪರಿಸ್ಥಿತಿಯನ್ನು ಗಂಭೀರ ವಿಶ್ವಾಸಾರ್ಹ ಬಿಕ್ಕಟ್ಟು ಎಂದು ವರ್ಣಿಸುತ್ತಿವೆ. ಎರಡೂ ದೇಶಗಳ ನಡುವಿನ ಈ ಸ್ಥಿತಿ ಇದೇ ರೀತಿ ಮುಂದುವರೆದರೆ, ಅದು ಕೇವಲ ರಾಜತಾಂತ್ರಿಕ ಬಿಕ್ಕಟ್ಟಾಗಿಯೇ ಉಳಿಯದೆ, ಸಮುದ್ರ ಸುರಕ್ಷತೆ, ಜಾಗತಿಕ

» ನಾಲ್ಕನೇ ಪುಟದಲ್ಲಿ



**ಮತ್ತೆ ತೀವ್ರಗೊಂಡ ಸಂಘರ್ಷ**

ಅಮೇರಿಕಾ ಮತ್ತು ಇರಾನ್ ನಡುವಿನ ಸಂಘರ್ಷ ಮತ್ತೆ ತೀವ್ರಗೊಂಡಿದೆ, ಅಮೇರಿಕಾ ಸೇನೆ ಇರಾನ್ ಧ್ವಜದ ಸರಕು ಹಡಗನ್ನು ವಶಪಡಿಸಿಕೊಂಡ ಬೆನ್ನಲ್ಲೇ ಇರಾನ್ ಡ್ರೋನ್ ದಾಳಿ ನಡೆಸಿರುವ ಘಟನೆ ವರದಿಯಾಗಿದೆ. ಓಮನ್ ಸಮುದ್ರ ಹಾಗು ಹೊರ್ಮುಜ್ ಜಲಸಂಧಿ ಸುತ್ತಲಿನ ಪ್ರದೇಶದಲ್ಲಿ ಅಮೇರಿಕಾ ನೌಕಾಪಡೆಯ ಯುದ್ಧ ಹಡಗುಗಳನ್ನು ಗುರಿಯಾಗಿಸಿ ಕೊಂಡು ಇರಾನ್ ಡ್ರೋನ್ ದಾಳಿ ನಡೆಸಿದೆ.

# ಗಾಳಿಮಳೆಗೆ ಹಾರಿಹೋದ ಛಾವಣಿ: ಕಾರುಗಳಿಗೆ ಹಾನಿ


## ದೊಡ್ಡಮಗ್ಗೆ ಗ್ರಾಮದಲ್ಲಿ ಮಳೆ ಅವಾಂತರ: ಜನಜೀವನ ತತ್ತರ


• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಸೋಮವಾರ ಸಂಜೆ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಜನಜೀವನ ತತ್ತರಿಸಿದ್ದು, ಹೆಚ್ಚಿನ ಪ್ರಮಾಣದ ಹಾನಿ ಸಂಭವಿಸಿದೆ. ಗುಡುಗು ಮಿಂಚಿನೊಂದಿಗೆ ಸುರಿದ ಗಾಳಿಮಳೆಯಿಂದ ಮನೆ, ಕಾರುಗಳು ಜಖಂಗೊಂಡಿವೆ.

ತಾಲ್ಲೂಕಿನ ದೊಡ್ಡಮಗ್ಗೆ ಗ್ರಾಮದಲ್ಲಿ ಗಾಳಿಯ ವೇಗಕ್ಕೆ ಕಾಲೇಜು ಕಟ್ಟಡ, ಬಿಜಿಎಸ್ ಸಮುದಾಯ ಭವನ ಹಾಗು ವಾಣಿಜ್ಯ ಮಳಿಗೆಗಳ ಛಾವಣಿಗೆ ಅಳವಡಿಸಿದ್ದ ಶೀಟ್‌ಗಳು ಗಾಳಿಗೆ ಹಾರಿ ಹೋಗಿ ಅವಾಂತರವೇ ಸೃಷ್ಟಿಯಾಗಿತ್ತು.

ಗಾಳಿಯಲ್ಲಿ ಹಾರಿಹೋದ ಶೀಟ್‌ಗಳು ರಸ್ತೆಯ ಮಧ್ಯೆ ಬಿದ್ದಿದ್ದು, ಕೆಲ ಕಾಲ ವಾಹನ ಸಂಚಾರಕ್ಕೂ ಅಡಚಣೆ ಉಂಟಾಯಿತು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸದೆ ದೊಡ್ಡ ಅನಾಹುತ ತಪ್ಪಿದೆ. ಜೋರು ಗಾಳಿಯ ಪರಿಣಾಮ ಮನೆಗಳ ಮೇಲ್ಛಾವಣಿಯ ಶೀಟ್‌ಗಳು ಸಹ ಹಾರಿ ಹೋಗಿ ಮಳೆ ನೀರು ಮನೆಗಳೊಳಗೆ ನುಗ್ಗಿದೆ. ಅದರಿಂದ ಮನೆಗಳಲ್ಲಿ ಇದ್ದ ಗೃಹೋಪಯೋಗಿ ವಸ್ತುಗಳು ಹಾನಿಗೊಳಗಾಗಿದ್ದು, ನಿವಾಸಿಗಳು ಸಂಕಷ್ಟದ ಪರಿಸ್ಥಿತಿ ಎದುರಿಸುವಂತಾಯಿತು.





ಮರದ ಕೊಂಬೆ ಮುರಿದು ಬಿದ್ದು ಎರಡು ಕಾರುಗಳು ಜಖಂಗೊಂಡಿವೆ. ಅದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದ್ದು, ಕೆಲ ಕಾಲ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು.

ಇನ್ನು ಮರದ ಕೊಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದ ಪರಿಣಾಮ ಹಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಗ್ರಾಮಸ್ಥರು ಕತ್ತಲಲ್ಲಿ ಕಾಲ ಕಳೆ ಯುವಂತಾಯಿತು. ಸ್ಥಳೀಯರು ತಕ್ಷಣವೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು, ದುರಸ್ತಿ ಕಾರ್ಯಗಳು ಮುಂದುವರಿದಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮಳೆಯಾಗುವ ಸಾಧ್ಯತೆ ಇರುವ ಹಿನ್ನಲೆಯಲ್ಲಿ, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಹವಮಾನ ಇಲಾಖೆ ಮುನ್ಸೂಚನೆ ನೀಡಿದೆ.

# ಅಶ್ವರೂಢ ಬಸವೇಶ್ವರರ ಕಂಚಿನ ಪ್ರತಿಮೆ ಲೋಕಾರ್ಪಣೆ

• ಪ್ರಜೋದಯ ವರದಿ

**ಅರಸೀಕೆರೆ:** ಕಲ್ಪತರು ನಾಡು, ಸಿದ್ಧರ ಬೀಡು ಎಂದೇ ಖ್ಯಾತಿ ಪಡೆದ ಅರಸೀಕೆರೆಯಲ್ಲಿ ಸೋಮವಾರ ಜಗಜ್ಯೋತಿ ಶ್ರೀ ಬಸವೇಶ್ವರರ 1480 ಕೆ.ಜಿ ತೂಕದ ಅಶ್ವರೂಢ ಬೃಹತ್ ಕಂಚಿನ ಪ್ರತಿಮೆಯನ್ನು ಲೋಕಾರ್ಪಣೆ ಮಾಡಲಾಯಿತು.

ಅಕ್ಷಯ ತೃತೀಯ ಹಾಗು ಬಸವ ಜಯಂತಿ ಹಬ್ಬದ ಪವಿತ್ರ ದಿನದಂದು ನಗರದಲ್ಲಿ ಜರುಗಿದ ಕಾರ್ಯಕ್ರಮ ಭಕ್ತಿ-ಭಾವಪೂರ್ಣ ವಾತಾವರಣದಲ್ಲಿ ನಡೆಯಿತು. ಶ್ರೀ ಬಸವೇಶ್ವರರ 893ನೇ ಜಯಂತಿ ಅಂಗವಾಗಿ ಬೃಹತ್ ಕಂಚಿನ ಪ್ರತಿಮೆಯನ್ನು ಭವ್ಯವಾಗಿ ಅನಾವರಣಗೊಳಿಸುವ ಮೂಲಕ ತಾಲ್ಲೂಕಿನ ಬಸವ ತತ್ವಾನುಯಾಯಿಗಳ ದಶಕಗಳ ಕನಸು ನನಸಾಯಿತು.

ನಗರದ ಬಸ್ ನಿಲ್ದಾಣ-ರೈಲು ನಿಲ್ದಾಣ ಸಂಪರ್ಕಿಸುವ ನಗರಸಭೆ ಸ್ಥಳದಲ್ಲಿ ಸ್ಥಾಪಿಸಲಾದ ಈ ಪ್ರತಿಮೆಯನ್ನು ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರ ನೇತೃತ್ವದಲ್ಲಿ ವಿವಿಧ ಮಠಾಧೀಶರ ಸಾನಿಧ್ಯದಲ್ಲಿ ಲೋಕಾರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಭಕ್ತರು ಹಾಗು ಸಾರ್ವಜನಿಕರು ಭಾಗವಹಿಸಿದ್ದರು.

ಸುಕ್ಷೇತ್ರ ಕೆರೆಗೋಡಿ ರಂಗಾಪುರದ ಶ್ರೀ ಗುರುಪರದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ವಿಶ್ವಕ್ಕೆ ಶಾಂತಿ ಸಂದೇಶ ಸಾರಿದ ಮಹಾನ್ ವಚನಕಾರ ಬಸವೇಶ್ವರರ ಪ್ರತಿಮೆ ಈ ಭಾಗದಲ್ಲಿ ಪ್ರತಿಷ್ಠಾಪನೆಯಾಗಿರುವುದು ಜನರ ಪುಣ್ಯ. ಪ್ರತಿಮೆ ಇರುವ ಸ್ಥಳದಲ್ಲಿ ಶಾಂತಿ, ಸಮೃದ್ಧಿ ನೆಲೆ ಸುತ್ತದೆ. ಶಾಸಕ ಶಿವಲಿಂಗೇಗೌಡ ಅವರು ಅಭಿವೃದ್ಧಿಯ ಜೊತೆಗೆ ಧಾರ್ಮಿಕ ಸಂರಕ್ಷಣೆಯಲ್ಲೂ ಮಹತ್ವದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು.

» ನಾಲ್ಕನೇ ಪುಟದಲ್ಲಿ



**ನಂದಿಗೆ ವಿಶೇಷ ಪೂಜೆ**

ನಗರದ ಶಾನುಭೋಗರ ಬೀದಿಯಲ್ಲಿರುವ ಶ್ರೀ ಬಸವಣ್ಣನವರ ದೇವಾಲಯದಲ್ಲಿ ಬಸವೇಶ್ವರ ಜಯಂತಿ ಪ್ರಯುಕ್ತ ನಂದಿ ವಿಗ್ರಹಕ್ಕೆ ವಿಶೇಷ ಪೂಜಾ ಕೈಂಕರ್ಯ ನೆರವೇರಿದವು. ಪ್ರಾತಃ ಕಾಲದಿಂದಲೇ ಲೋಕ ಕಲ್ಯಾಣಾರ್ಥ ರುದ್ರಾಭಿಷೇಕ, ಬಿಲ್ವಪತ್ರೆ, ನಾಗದಳ ಹೂವಿನ ಅರ್ಚನೆ ಸೇರಿ ವಿವಿಧ ಪೂಜಾ ವಿಧಿಗಳು ಜರುಗಿದವು. ಹೂವಿನ ಅಲಂಕಾರದಲ್ಲಿ ಕಂಗೊಳಿಸಿದ್ದ ನಂದಿ ಭಕ್ತರ ಗಮನ ಸೆಳೆಯಿತು.

## ಈ ಬಾರಿ 15 ಸಾವಿರ ಹೆಕ್ಟೇರ್ ಬಿತ್ತನೆ ಗುರಿ | 3 ಲಕ್ಷ ಚೀಲ ಬಿತ್ತನೆ ಆಲೂಗೆಡ್ಡೆ ದಾಸ್ತಾನು


# ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ಪುನಶ್ಚೇತನಗೊಳಿಸುವ ಪ್ರಯತ್ನ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಒಂದು ಕಾಲದಲ್ಲಿ ಹಾಸನ ಎಂದರೆ ಆಲೂಗೆಡ್ಡೆ ಎನ್ನುವ ಮಾತಿತ್ತು. ಅಂಗಮಾರಿ ರೋಗದಿಂದ ಕೈಸುಟ್ಟಿಕೊಂಡ ರೈತರು ಪರ್ಯಾಯ ಬೆಳೆಯತ್ತ ಮುಖ ಮಾಡಿದ್ದರಿಂದ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಯುವವರ ಸಂಖ್ಯೆ ಕುಸಿತ ಕಂಡಿದೆ. ಈ ಬಾರಿ ಪುನಶ್ಚೇತನಗೊಳಿಸುವ ಪ್ರಯತ್ನಕ್ಕೆ ಜಿಲ್ಲಾಡಳಿತ, ತೋಟಗಾರಿಕೆ ಇಲಾಖೆ ಕೈಹಾಕಿದೆ.

ಈಗಾಗಲೇ 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಗೆ ಬೇಕಾದಷ್ಟು 3 ಲಕ್ಷ ಚೀಲ ಬಿತ್ತನೆ ಆಲೂಗೆಡ್ಡೆಯನ್ನು ಪಂಜಾಬ್‌ನಿಂದ ತರಿಸಿಕೊಂಡು ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಕೋಲ್ಡ್‌ಸ್ಟೋರೇಜ್‌ನಲ್ಲಿ ದಾಸ್ತಾನು ಇಡಲಾಗಿದೆ. ಜೊತೆಗೆ ಜಿಲ್ಲಾಡಳಿತ ರೈತರು ಮತ್ತು ವರ್ತಕ ರೊಂದಿಗೆ ಮೂರು ಸುತ್ತಿನ ಸಭೆ, ಸಂವಾದ ನಡೆಸುವ ಮೂಲಕ ರೈತರನ್ನು ಪುನಃ ಆಲೂಗೆಡ್ಡೆ ಬೆಳೆಯಲು ಉತ್ತೇಜಿಸಲಾಗುತ್ತಿದೆ.



ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿರುವ ಆಲೂಗೆಡ್ಡೆ ಬೆಳೆಯನ್ನು ದಶಕಗಳ ಹಿಂದೆ ಜಿಲ್ಲೆಯಲ್ಲಿ 50 ಸಾವಿರ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಅಂಗಮಾರಿ ರೋಗದ ಕಾರಣದಿಂದ ಪ್ರಸ್ತುತ 5 ಸಾವಿರ ಹೆಕ್ಟೇರ್‌ಗೆ ಕುಸಿತ ಕಂಡಿದೆ. ಆಲೂಗೆಡ್ಡೆ ಬೆಳೆಯುತ್ತಿದ್ದ ರೈತರು ಜೋಳದ ಬೆಳೆಯತ್ತ ವಾಲಿದ್ದಾರೆ. ಕಳೆದ ವರ್ಷ ಜೋಳವೂ ಬಿಳಿಸುಳಿ ರೋಗಕ್ಕೆ ತುತ್ತಾಗಿದ್ದರಿಂದ, ರೈತರನ್ನು ಪುನಃ ಆಲೂಗೆಡ್ಡೆಗೆ ಪ್ರೋತ್ಸಾಹಿಸಲು ಜಿಲ್ಲಾಡಳಿತ ಸತತ ಪ್ರಯತ್ನ ನಡೆಸುತ್ತಿದೆ.

ಈಗಾಗಲೇ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದು ಮಾತ್ರವಲ್ಲದೇ ವರ್ತಕರು, ಅಧಿಕಾರಿಗಳು, ರೈತರೊಂದಿಗೆ ಸಂವಾದ-ಚರ್ಚೆ ನಡೆಸಿ ಉತ್ತೇಜಿಸಿ ಭರವಸೆ ಮೂಡಿಸಲಾಗುತ್ತಿದೆ. ಈ ಹಿನ್ನಲೆಯಲ್ಲೇ ಈ ವರ್ಷ 15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬಿತ್ತನೆ ಗುರಿ ಹೊಂದಲಾಗಿದೆ.

ಕಳೆದ ಎರಡು ತಿಂಗಳಿಂದಲೇ ಆಲೂಗೆಡ್ಡೆ ಬೆಳೆಯಲು ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ರೂಪಿಸಲಾಗಿದೆ. ಮೇ ತಿಂಗಳಿನಲ್ಲಿ ಮುಂಗಾರು ಹಂಗಾಮು ಪ್ರಾರಂಭವಾಗುವುದರಿಂದ ಏಪ್ರಿಲ್ ತಿಂಗಳಿನಿಂದಲೇ ಜಿಲ್ಲಾಡಳಿತ ಮತ್ತು ತೋಟಗಾರಿಕೆ ಇಲಾಖೆಯಿಂದ ಸಿದ್ಧತೆ ನಡೆದೆ. ಇನ್ನೇನು ಕೆಲ ದಿನಗಳಲ್ಲಿ ಜಿಲ್ಲಾಧಿಕಾರಿ, ಜನಪ್ರತಿನಿಧಿಗಳ ಸಮ್ಮುಖದಲ್ಲಿ ವರ್ತಕರು, ರೈತರೊಂದಿಗೆ ಸಭೆ ನಡೆಸಿ ಬಿತ್ತನೆ ಆಲೂಗೆಡ್ಡೆ ಬೆಲೆ ನಿಗದಿಗೊಳಿಸಲಾಗುತ್ತದೆ. ಮೇ ತಿಂಗಳ 2ನೇ ವಾರದಿಂದ ಬಿತ್ತನೆ ಬೀಜದ ಖರೀದಿ ಕೂಡ ಪ್ರಾರಂಭವಾಗಲಿದೆ.

ಜಿಲ್ಲೆಯ ಆಲೂಗೆಡ್ಡೆಗೆ ವಿಶೇಷ ಮನ್ನಣೆ

ಜಿಲ್ಲೆಯಲ್ಲಿ ಬೆಳೆಯುವ ಆಲೂಗೆಡ್ಡೆ ಹೆಚ್ಚಿನ ಇಳುವರಿಯೊಂದಿಗೆ ಗಾತ್ರವೂ ಹೆಚ್ಚಾಗಿದ್ದರಿಂದ ಇಲ್ಲಿ ಬೆಳೆಯುವ ಆಲೂಗಡ್ಡೆಗೆ ವಿಶೇಷ ಮನ್ನಣೆಯೂ ಇತ್ತು. ಚಿಪ್ಸ್ ಮಾರುಕಟ್ಟೆ ಹಾಗು ಇತರೆ ಕಂಪನಿಗಳು ಆಲೂಗಡ್ಡೆಯನ್ನು ಖರೀದಿಸುತ್ತಿದ್ದವು. ಆದರೆ, ಬದಲಾದ ಹವಾಮಾನ, ಅಂಗಮಾರಿ ರೋಗದಿಂದಾಗಿ ಇಲ್ಲಿನ ರೈತರು ಆಲೂಗಡ್ಡೆ ಬೆಳೆಗೆ ಹಿಂದೇಟು ಹಾಕುವಂತಾಗಿದೆ.

» ನಾಲ್ಕನೇ ಪುಟದಲ್ಲಿ

**ವರ್ತಕರಿಗೆ ತರಬೇತಿ**

ಬಿತ್ತನೆ ಆಲೂಗಡ್ಡೆ ದಾಸ್ತಾನು, ಬೀಜೋಪಚಾರದ ಬಗ್ಗೆ ತೋಟಗಾರಿಕೆ ಇಲಾಖೆಯಿಂದ ವರ್ತಕರಿಗೆ ಈಗಾಗಲೇ ತರಬೇತಿ ನೀಡಿ ಮುಂಜಾಗ್ರತಾ ಕ್ರಮಗಳ ಬಗ್ಗೆ ತಿಳಿಸಲಾಗಿದೆ. ಗುಣಮಟ್ಟದ ಬಿತ್ತನೆ ಬೀಜದ ಆಯ್ಕೆ, ಔಷಧ, ರಸಗೊಬ್ಬರ ಪೂರೈಕೆ ಬಗ್ಗೆಯೂ ವರ್ತಕರಿಗೆ ಸೂಚನೆ ನೀಡಲಾಗಿದೆ.

"ಈ ವರ್ಷ ಆಲೂಗೆಡ್ಡೆ ಬೆಳೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ ನಡೆಸಿ, ರೈತರು-ವರ್ತಕರೊಂದಿಗೆ ಚರ್ಚಿಸಲಾಗಿದೆ. ಈಗಾಗಲೇ 3 ಲಕ್ಷ ಚೀಲ ಬಿತ್ತನೆ ಆಲೂಗೆಡ್ಡೆಯನ್ನು ತರಿಸಿಕೊಂಡು ದಾಸ್ತಾನಿಸಿಕೊಳ್ಳಲಾಗಿದೆ.

-ಯೋಗೇಶ್, ಉಪನಿರ್ದೇಶಕ ತೋಟಗಾರಿಕೆ ಇಲಾಖೆ

# ಸಿಡಿಲು ಬಡಿದು ವೃದ್ಧೆ ಸಾವು

• ಪ್ರಜೋದಯ ವರದಿ



**ಆಲೂರು:** ದನ ಮೇಯಿಸಲು ಹೋಗಿದ್ದ ವೃದ್ಧೆಗೆ ಸಿಡಿಲು ಬಡಿದು ಮೃತಪಟ್ಟ ಘಟನೆ ತಾಲ್ಲೂಕಿನ ಕುಂದೂರು ಹೋಬಳಿ ಹುಲಕುಂದ ಎಸ್ಟೇಟ್ ಸಮೀಪ ಸೋಮವಾರ ಸಂಜೆ ಸಂಭವಿಸಿದೆ. ಮಾದಿಹಳ್ಳಿ ಗ್ರಾಮದ ನೀಲಮ್ಮ (70) ಮೃತ ದುರ್ದೈವಿ.

ಸೋಮವಾರ ಸಂಜೆ 4.45ರ ವೇಳೆಗೆ ಅವರು ಹಸುಗಳನ್ನು ಮೇಯಿ ಸುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಮಳೆ ಆರಂಭವಾಗಿತ್ತು. ಮಳೆಯಿಂದ ರಕ್ಷಣೆ ಪಡೆಯಲು ಸಮೀಪದ ಮರದಡಿಯಲ್ಲಿ ಆಶ್ರಯ ಪಡೆದಿದ್ದರು. ಇದೇ ವೇಳೆ ಸಿಡಿಲು ಬಡಿದು ಮರಕ್ಕೂ ಹಾಗೂ ನೀಲಮ್ಮ ಅವರಿಗೆ ತಗುಲಿದ ಪರಿಣಾಮ ಅವರು ಸ್ಥಳದಲ್ಲೇ ಮೃತ ಪಟ್ಟಿದ್ದಾರೆ. ಸಿಡಿಲಿನ ಭಾರೀ ರಭಸಕ್ಕೆ ಮರಕ್ಕೂ ಹಾನಿಯಾಗಿದೆ. ಮೃತದೇಹ ವನ್ನು ಆಲೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

# ಕೆರೆಯಲ್ಲಿ ಮುಳುಗಿ ಮಾವ-ಅಳಿಯ ಸಾವು

• ಪ್ರಜೋದಯ ವರದಿ

**ಹಾಸನ:** ಹಸುವಿಗೆ ನೀರು ಕುಡಿಸುವು ದಕ್ಕಾಗಿ ಕೆರೆಗೆ ಇಳಿದಿದ್ದ ಅಳಿಯ ಮುಳುಗಿದಾಗ ರಕ್ಷಣೆಗೆ ಧಾವಿಸಿದ ಮಾವ ಸಹ ಮುಳುಗಿ ಮೃತಪಟ್ಟಿರುವ ಘಟನೆ ಘಟನೆ ಅರಸೀಕೆರೆ ತಾಲ್ಲೂಕು ಎನ್.ಹೊಸಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪ್ರಭಾಕರ್ (40) ಹಾಗು ಅಳಿಯ ಪ್ರತೀಕ್ (12) ಮೃತರು. ಬೇಸಿಗೆ ರಜೆ ಹಿನ್ನಲೆಯಲ್ಲಿ ಪ್ರಭಾಕರ್ ಅವರ ಸಹೋದರಿ ಮಗ ಪ್ರತೀಕ್ ಮಾವನ ಮನೆಗೆ ಬಂದಿದ್ದ. ಭಾನುವಾರ ಮಧ್ಯಾಹ್ನ ಜಮೀನು ಪಕ್ಕದ ಕೆರೆಯಲ್ಲಿ ಹಸುವಿಗೆ ನೀರು ಕುಡಿಸಲೆಂದು ಇಬ್ಬರೂ ತೆರಳಿದ್ದರು. ಹಸುವಿನ ಹಗ್ಗ ಹಿಡಿದು ಕೆರೆಗೆ ಇಳಿದ ಪ್ರತೀಕ್ ಗೊತ್ತಾಗದೆ ಆಳಕ್ಕೆ ಇಳಿದಿದ್ದಾನೆ. ಆತ ನೀರಿನಲ್ಲಿ ಮುಳುಗುತ್ತಿರು ವುದನ್ನು ಕಂಡ ಪ್ರಭಾಕರ್ ರಕ್ಷಣೆಗೆ ಧಾವಿಸಿದ್ದು, ನೀರಿನ ಆಳ ಹೆಚ್ಚಿದ್ದರಿಂದ ವಾಪಾಸ್ ಬರಲು ಸಾಧ್ಯವಾಗದೆ ಮೃತಪಟ್ಟಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ದಳ ಸಿಬ್ಬಂದಿ ಹಾಗು ಗಂಡಸಿ ಪೊಲೀಸರು ನಿರಂತರ ಕಾರ್ಯಾಚರಣೆ ಮೂಲಕ ಎರಡೂ ಶವಗಳನ್ನು ಮೇಲಕ್ಕೆತ್ತಿದರು. ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

**ಈಜು ಬರುತ್ತಿರಲಿಲ್ಲ**

ಪ್ರಭಾಕರ್ ಅವರು ಪ್ರತಿದಿನ ಅದೇ ಕೆರೆಯಲ್ಲಿ ಹಸುವಿಗೆ ನೀರು ಕುಡಿಸುತ್ತಿದ್ದರು. ಭಾನುವಾರ ಅಳಿಯನನ್ನು ಜೊತೆಗೆ ಕರೆದುಕೊಂಡು ಹೋಗಿದ್ದರು. ಕೆರೆ ದಡದಿಂದಲೇ ವಾಪಾಸ್ ಬರುತ್ತಾನೆಂದು ಪ್ರಭಾಕರ್ ಆ ಕಡೆಗೆ ಗಮನ ಹರಿಸಲಿಲ್ಲ. ಪ್ರತೀಕ್ ಮುಳುಗುತ್ತಿದ್ದಂತೆ ರಕ್ಷಣೆಗೆ ಧಾವಿಸಿದರೂ ವಾಪಾಸ್ ಬರಲು ಸಾಧ್ಯವಾಗಿಲ್ಲ. ಇಬ್ಬರಿಗೂ ಈಜು ಬಾರದೆ ಇರುವುದು ದುರ್ಘಟನೆಗೆ ಕಾರಣ ಎನ್ನಲಾಗಿದೆ. ದುದ್ದ ಸಮೀಪದ ಸೋಮನಹಳ್ಳಿ ಗ್ರಾಮದ ಪ್ರತೀಕ್ ಪ್ರತಿವರ್ಷ ಬೇಸಿಗೆ ರಜೆಯಲ್ಲಿ ಮಾವನ ಮನೆಗೆ ಬರುತ್ತಿದ್ದನಂತೆ. ರಜೆಯ ದಿನಗಳನ್ನು ತನ್ನ ಮಗ ತವರು ಮನೆಯಲ್ಲಿ ಕಳೆಯ ಲೆಂದು ಪ್ರಭಾಕರ್ ಸಹೋದರಿ ಕಳು ಹಿಸಿಕೊಟ್ಟಿದ್ದರು. ಆದರೆ ವಿಧಿಯಾಟ ಬೇರೇಯೇ ಇತ್ತು.





# ಗಣತಿ ಕಾರ್ಯ ಪರಿಶೀಲಿಸಿದ ಜಿಲ್ಲಾಧಿಕಾರಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ನಗರದ ಲಕ್ಷ್ಮೀಪುರ ಬಡಾವಣೆ, ಎಸ್‌ಬಿಎಂ ಶಾಲೆ ಹಿಂಭಾಗ ಹಾಗು ಪೆನ್ಷನ್ ಮೊಹಲ್ಲಾಗೆ ಭೇಟಿ ನೀಡಿ ಜನಗಣತಿಯ ಗಣತಿದಾರರೊಂದಿಗೆ ಮನೆ ಮನೆಗೆ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು, 2027ರ ಜನಗಣತಿ ದೇಶದಾದ್ಯಂತ ನಡೆಯುತ್ತಿದೆ. ಅದೇ ರೀತಿ ಜಿಲ್ಲೆಯಲ್ಲಿ ಗಣತಿ ಕಾರ್ಯ ನಡೆಯುತ್ತಿದೆ. ಗಣತಿದಾರರು ಮನೆ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಕೇಳುವ 34 ಸರಳ ಪ್ರಶ್ನೆಗಳಿಗೆ ಉತ್ತರ ನೀಡಿ ಕೇವಲ 5 ನಿಮಿಷದಲ್ಲಿ ಗಣತಿ ಕಾರ್ಯ ಮುಗಿಯುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಸಹಕರಿಸುವಂತೆ ಕೋರಿದರು.

ಪ್ರಸ್ತುತ ಬಿಸಿಲು ಹೆಚ್ಚಾಗಿರುವುದರಿಂದ ಗಣತಿದಾರರು ಬೆಳಿಗ್ಗೆ 6 ಗಂಟೆಗೆ ಬರುತ್ತಾರೆ. ಅವರಿಗೆ ಮಾಹಿತಿ ನೀಡಿ ಎಂದ ಅವರು ಕೆಲವು ಕಡೆ ಮಾಹಿತಿ ನೀಡಲು ಅನುಮಾನಿಸುತ್ತಿರುವುದು ಕಂಡುಬಂದಿದೆ. ಆ ರೀತಿ ಅನುಮಾನ ಬಂದರೆ ಗಣತಿದಾರರಿಗೆ ಗುರುತಿನ ಚೀಟಿ ನೀಡಲಾಗಿದೆ. ಅದರಲ್ಲಿ ಕ್ಯೂ ಆರ್ ಕೋಡ್ ಇದೆ. ಅದನ್ನು ಸ್ಕ್ಯಾನ್ ಮಾಡಿದರೆ ಗಣತಿದಾರರ ಹೆಸರು ಮತ್ತು ಇತರ ಮಾಹಿತಿ ದೊರೆಯಲಿದೆ ಎಂದು ಹೇಳಿದರು. ಜನಗಣತಿ ದೇಶದ ಶಾಸನಬದ್ಧ ಕರ್ತವ್ಯ. ಪ್ರತಿಯೊಬ್ಬ ನಾಗರಿಕರು ಗೌರವಯುತವಾಗಿ ಗಣತಿದಾರರಿಗೆ ಮಾಹಿತಿ ನೀಡಿ ಸಹಕರಿಸಿ ಎಂದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಮಹಾನಗರ ಪಾಲಿಕೆ ಆಯುಕ್ತ ಆರ್.ಕೃಷ್ಣಮೂರ್ತಿ, ತಹಶೀಲ್ದಾರ್ ಗೀತಾ ಮತ್ತಿತರರು ಹಾಜರಿದ್ದರು.



# ಅನಾಥ ಮಕ್ಕಳ ಶಿಕ್ಷಣಕ್ಕೆ ನೆರವಿನ ಭರವಸೆ ನೀಡಿದ ಸಂಸದ

• ಪ್ರಜೋದಯ ವರದಿ

**ಬೇಲೂರು:** ಮಂತ್ರಾಲಯ ಬಳಿ ಏ.16ರಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಶುಭಾ ಅವರ ಇಬ್ಬರು ಮಕ್ಕಳ ವ್ಯಾಸಂಗಕ್ಕೆ ನೆರವು ನೀಡುವುದಾಗಿ ಸಂಸದ ಶ್ರೇಯಸ್ ಪಟೇಲ್ ಅವರು ಭರವಸೆ ನೀಡಿದರು.

ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿದ ಅವರು ಅಪಘಾತದಲ್ಲಿ ವಿಧಿ ವಶರಾದ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಅಪಘಾತದಲ್ಲಿಕುಮಾರ್, ಜಯಮ್ಮ, ಸುನೀಲ್, ದೀಪಿಕಾ ಹಾಗು ನಿಶ್ವಿಕಾ ಒಂದೇ ಕುಟುಂಬದವರು ಮೃತರಾಗಿದ್ದಾರೆ. ಅದೇ ಗ್ರಾಮದ ತೇಜಸ್ವಿನಿ, ಶುಭಾ, ಚಿಕ್ಕಮಗಳೂರು ಜಿಲ್ಲೆ ಉಡೇವು ಗ್ರಾಮದ ಪುಟ್ಟಮ್ಮ, ಮೀನಾಕ್ಷಿ ಸಹ ಮೃತಪಟ್ಟಿದ್ದಾರೆ.

**ಅನಾಥರಾದ ಶುಭಾ ಮಕ್ಕಳು**

ಅಪಘಾತದಲ್ಲಿ 35 ವರ್ಷದ ಶುಭಾ ಅವರು ಮೃತಪಟ್ಟಿದ್ದು ಇಬ್ಬರು ಮಕ್ಕಳು ಅನಾಥರಾಗಿ ದ್ದಾರೆ. ಶುಭಾ ಪತಿ ಆನಂದ ಸಹ ಎರಡು ವರ್ಷಗಳ ಹಿಂದೆ ನಿಧನರಾಗಿದ್ದಾರೆ. ಮಕ್ಕಳಾದ ದೀಪಿಕಾ ಮತ್ತು ದೀಕ್ಷಿತ್ ಸಹ ಅಪಘಾತದಲ್ಲಿ ಗಾಯ ಗೊಂಡಿದ್ದು ಕರ್ನೂಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆ್ಯಂಬು ಲೆನ್ಸ್ ವ್ಯವಸ್ಥೆ ಮಾಡಿದರೆ ಅವರನ್ನು ಹಿಮ್ಸ್‌ಗೆ ದಾಖಲಿಸ ಬಹುದು. ಕುಟುಂಬಕ್ಕೆ ಬೇರೆ ವಾರಸುದಾರರು ಇಲ್ಲದಿರುವ ಕಾರಣ ಅವರ ಮಾವ ಆಸ್ಪತ್ರೆಯಲ್ಲಿದ್ದು ನೋಡಿಕೊಳ್ಳುತ್ತಿದ್ದಾರೆ. ಅನಾಥ ಮಕ್ಕಳಿಗೆ ನೆರವಾಗ ಬೇಕೆಂದು ಗ್ರಾಮಸ್ಥರು ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಸಂಸದ ಶ್ರೇಯಸ್ ಪಟೇಲ್ ಅವರು, ಮಕ್ಕಳ ವ್ಯಾಸಂಗಕ್ಕೆ ತೊಂದರೆ ಯಾಗದಂತೆ ಸಹಾಯ ಮಾಡಲಾಗುವುದು. ಗಾಯಾಳುಗಳೆಲ್ಲಾ ಗುಣಮುಖರಾಗಲಿ. ಎಲ್ಲರ ಕಷ್ಟದಲ್ಲಿ ನಾನೂ ಭಾಗಿಯಾಗುತ್ತೇನೆಂದು ಭರವಸೆ ನೀಡಿದರು.



## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಬಣ್ಣನೆ | ಅರ್ಥಪೂರ್ಣ ಬಸವ ಜಯಂತಿ

# ಗೊಡ್ಡು ಸಂಪ್ರದಾಯಗಳ ವಿರುದ್ಧ ಹೋರಾಡಿದ ಬಸವಣ್ಣ

• ಪ್ರಜೋದಯ ವರದಿ

**ಹಾಸನ:** ಲಿಂಗ ತಾರತಮ್ಯ ಸೇರಿ ಅನೇಕ ಗೊಡ್ಡು ಸಂಪ್ರದಾಯಗಳ ವಿರುದ್ಧ ಹೋರಾಡಿದ ವಿಶ್ವಗುರು ಬಸವಣ್ಣ ಅವರ ತತ್ವಾದರ್ಶಗಳು ನಮಗೆ ದಾರಿದೀಪ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿದ್ದ ಬಸವ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, 800 ವರ್ಷಗಳ ಹಿಂದೆಯೇ ಪ್ರಜಾಪ್ರಭುತ್ವದ ಸಂದೇಶ ಸಾರಿದವರು ವಿಶ್ವಗುರು ಬಸವಣ್ಣ ಎಂದರು.

ಬಾಲ್ಯದಲ್ಲಿಯೇ ತಮ್ಮ ಸಹೋದರಿಗೆ ಉಪನಯನ ಮಾಡಲಿಲ್ಲವೆಂಬುದನ್ನು ಪ್ರಶ್ನಿಸಿ ಮೂಢ ನಂಬಿಕೆಗಳ ವಿರುದ್ಧ ಹೋರಾಟ ಪ್ರಾರಂಭಿಸಿದವರು ಬಸವಣ್ಣ. ಆ ಕಾಲದಲ್ಲಿ ಜಾರಿಯಲ್ಲಿದ್ದ ಸ್ತ್ರೀ ಅಸಮಾನತೆ, ಜಾತಿಯತೆ, ಕಂದಾಚಾರಗಳನ್ನು ಕಂಡು ಬಸವಣ್ಣ ಜರ್ಜರಿತರಾಗಿದ್ದರು. ಚಿಕ್ಕವಯಸ್ಸಿನಲ್ಲೇ ಜ್ಞಾನ, ಪ್ರಬುದ್ಧತೆ ಹೊಂದಿದ್ದ ಅವರು ಗೊಡ್ಡು ಸಂಪ್ರದಾಯಗಳ ವಿರುದ್ಧ ದನಿ ಎತ್ತಿದ್ದರೆಂದು ಸ್ಮರಿಸಿದರು.

ಅವರು ಜ್ಞಾನಿಯಷ್ಟೇ ಅಲ್ಲ, ಉತ್ತಮ ಆಡಳಿತಗಾರರು ಆಗಿದ್ದರೂ. ಸಮಾಜದ ನ್ಯೂನ್ಯತೆಗಳನ್ನು ಗ್ರಹಿಸಿ ಅವುಗಳಿಗೆ ಸರಿಯಾದ ಪರಿಹಾರ ಕಂಡು ಹಿಡಿಯುವ ಕ್ರಾಂತಿಕಾರಿ ನಿರ್ಣಯಗಳನ್ನು ಆಗಲೇ ಕೈಗೊಂಡಿದ್ದರು. ಅಂತಹ ನಿರ್ಧಾರಗಳನ್ನು ಈಗಿನ ಕಾಲದಲ್ಲಿ ತೆಗೆದುಕೊಳ್ಳುವ ಧೈರ್ಯ ಯಾರಿಗೂ ಇಲ್ಲ. ಮಾನವರನ್ನು ಮಾನವರಾಗಿ ಕಂಡು, ಯಾರು ಬೇಕಾದರೂ ಶರಣರಾಗಬಹುದಿತ್ತು. ಜ್ಞಾನಕ್ಕೆ ಶರಣಾಗುವ ವಿಧೇಯತೆ, ಆತ್ಮದಲ್ಲೇ ದೇವರಿದ್ದಾನೆಂಬ ಸಂದೇಶ ಸಾರಿದವರು ಬಸವಣ್ಣ ಎಂದರು.

ಕಾಯಕವೇ ಕೈಲಾಸ ಎಂಬ ಸಂದೇಶ ಸಾರಿ ಕೆಲಸದ ಮೂಲಕ ಯಾರು ಬೇಕಾದರೂ ದೇವರನ್ನು ಮುಟ್ಟಬಹುದೆಂದು ಬಸವಣ್ಣ ಪ್ರತಿಪಾದಿಸಿದ್ದರು. 1.96 ಲಕ್ಷ ಶರಣರಿಗೆ ದೀಕ್ಷೆ ನೀಡಿದ್ದರು. ಅವರು ಒಂದು ಪರಂಪರೆಯನ್ನೇ ಹುಟ್ಟು ಹಾಕಿದರು. ಶತ ಶತಮಾನಗಳಿಂದ ಸಂದೇಶ, ವಚನ ಮೂಲಕ ಜನರ ತಲುಪುತ್ತಿವೆ. ವಚನ ಸಾಹಿತ್ಯ ಕನ್ನಡ ಸಾಹಿತ್ಯವನ್ನು ಸಂಪದ್ಭರಿತವಾಗಿಸಿದೆ. ಕೇವಲ ಭಾಷೆಯನ್ನಲ್ಲ, ಸಂಸ್ಕೃತಿ, ಸಂದೇಶ, ಸಾಮಾಜಿಕ, ಸಮಾನತೆ ಒಳಗೊಂಡಂತೆ ಎಲ್ಲವನ್ನೂ ಹೇಳಿದೆ ಎಂದರು.

ಎಲ್ಲರನ್ನೂ ಬದಲಾಯಿಸಲು, ಲೋಕವನ್ನು ನಾವು ತಿದ್ದಲು ನಾವು ಹೋಗುತ್ತೇವೆ. ಆದರೆ ಮೊದಲು ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಆ ಮನೋಭಾವ ಎಲ್ಲರನ್ನೂ ಬರಬೇಕೆಂದು ಆಶಿಸಿದರು.

» ನಾಲ್ಕನೇ ಪುಟದಲ್ಲಿ



C M Y K C M Y K C M Y K

**ಬಣ್ಣ ನೋಡಿದರೆ ಕಪ್ಪು, ಹತ್ತಿರ ಹೋದರೆ ಕೆಟ್ಟ ವಾಸನೆ ಬೇರೆ. ಆದರೂ ಜನಸಾಮಾನ್ಯರು ನಿತ್ಯ ಬಯಸುವ, ಕೆಲವರು ಆರಾಧಿಸುವ, ಇಡೀ ವಿಶ್ವಕ್ಕೇ ಅವಶ್ಯಕವಾಗಿರುವ ಕೃಷ್ಣಸುಂದರಿಯ ಮಹಿಮೆ ಮಾತ್ರ ಅಪಾರ. ಈ ಸುಂದರಿಯ ಇತಿಹಾಸ ತುಂಬಾ ಹಳೆಯದು. ಲಕ್ಷಾಂತರ ವರ್ಷಗಳ ಹಿಂದೆ, ಪ್ರಾಣಿ ಪಕ್ಷಿ ಗಿಡ, ಇತ್ಯಾದಿ ಸಾವಯವ ಪದಾರ್ಥಗಳು ಭೂಮಿಯ ಅಡಿಯಲ್ಲಿ ಹೂತು ಹೋಗಿ, ಹೈಡ್ರೋ ಕಾರ್ಬನ್‌ಗಳಾಗಿ ರೂಪಾಂತರ ಗೊಳ್ಳುವುದರಿಂದ ಈ ಕೃಷ್ಣಸುಂದರಿ ಜನ್ಮತಾಳುತ್ತಾಳೆ.**

# ಈ ಕೃಷ್ಣಸುಂದರಿ ಮುಂದೆ ವಿಶ್ವಸುಂದರಿಯರೂ ಫೇಲ್!

ವಿದೇಶವಾಸಿ

ಈ ಕಚ್ಚಾ ತೈಲಾ ಅಥವಾ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಸುಮಾರು 5000 ವರ್ಷದ ಹಿಂದಿನದ್ದು. ಆಗಿನಿಂದ ಜನ ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ಆದರೆ, ಅದನ್ನು ಬಳಸುವ ವಿಧಾನ ಬೇರೆಯದಾಗಿತ್ತು. ಆ ಕಾಲದಲ್ಲಿ ಭೂಮಿ ಕೊರೆದು ತೈಲವನ್ನು ಸಂಸ್ಕರಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಸಮಸ್ಯೆಗೆ ಪರಿಹಾರ ಹುಡುಕಿದ್ದು ಉದ್ಯಮಿ ಎಡ್ವಿನ್ ಡ್ರೇಕ್, ಕಚ್ಚಾತೈಲ ಹೊರತೆಗೆಯಲು ಶುರು ಮಾಡಿದ. ಅಲ್ಲಿಂದ ಶುರುವಾಯಿತು ನೋಡಿ ತೈಲದ ಹಾರಾಟ.

ಈ ಕೃಷ್ಣಸುಂದರಿಯ ಮುಂದೆ ಯಾವ ವಿಶ್ವಸುಂದರಿಯೂ ನಿಲ್ಲುವುದಿಲ್ಲ. ಯಾವ ವಿಶ್ವಸುಂದರಿಯೇ ಆದರೂ ಕೆಲ ವರ್ಷಗಳ ನಂತರ ಬೇಡಿಕೆ ಕಳೆದುಕೊಳ್ಳುತ್ತಾಳೆ. ವರ್ಷ ಕಳೆದಂತೆ ಮುಪ್ಪು ಆವರಿಸುತ್ತದೆ, ಚರ್ಮ ಸುಕ್ಕುಗಟ್ಟುತ್ತದೆ, ದೇಹ ಭಾರವಾಗುತ್ತದೆ, ಮುಖ ಬಿಳಿಚಿಕೊಳ್ಳುತ್ತದೆ. ಬೇಡಿಕೆಯೂ ಕಡಿಮೆಯಾಗುತ್ತದೆ. ಆದರೆ ಈ ಕೃಷ್ಣಸುಂದರಿ ಎಲ್ಲ ವಿಶ್ವ ಸುಂದರಿಯರನ್ನು ಮೀರಿಸಿ, ವರ್ಷದಿಂದ ವರ್ಷಕ್ಕೆ ತನ್ನ ಬೇಡಿಕೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಇದ್ದಾಳೆ.

ಬಣ್ಣ ನೋಡಿದರೆ ಕಪ್ಪು, ಹತ್ತಿರ ಹೋದರೆ ಕೆಟ್ಟ ವಾಸನೆ ಬೇರೆ. ಆದರೂ ಜನಸಾಮಾನ್ಯರು ನಿತ್ಯ ಬಯಸುವ, ಕೆಲವರು ಆರಾಧಿಸುವ, ಇಡೀ ವಿಶ್ವಕ್ಕೇ ಅವಶ್ಯಕವಾಗಿರುವ ಕೃಷ್ಣಸುಂದರಿಯ ಮಹಿಮೆ ಮಾತ್ರ ಅಪಾರ. ಈ ಸುಂದರಿಯ ಇತಿಹಾಸ ತುಂಬಾ ಹಳೆಯದು. ಲಕ್ಷಾಂತರ ವರ್ಷಗಳ ಹಿಂದೆ, ಪ್ರಾಣಿ ಪಕ್ಷಿ ಗಿಡ, ಇತ್ಯಾದಿ ಸಾವಯವ ಪದಾರ್ಥಗಳು ಭೂಮಿಯ ಅಡಿಯಲ್ಲಿ ಹೂತು ಹೋಗಿ, ಹೈಡ್ರೋಕಾರ್ಬನ್‌ಗಳಾಗಿ ರೂಪಾಂತರ ಗೊಳ್ಳುವುದರಿಂದ ಈ ಕೃಷ್ಣಸುಂದರಿ ಜನ್ಮತಾಳುತ್ತಾಳೆ.

ಹುಡುಕಿ ತೆಗೆಯುವವರೆಗೂ ಭೂಮಿಯ ಅಡಿಯಲ್ಲಿ ನಿಕ್ಷೇಪಗಳ ರೂಪದಲ್ಲಿ ಅಡಗಿ ಕುಳಿತಿರುತ್ತಾಳೆ. ಕೆಲವೊಮ್ಮೆ ಭೂಮಿಯ ಮೇಲ್ಮೈನಲ್ಲಿ ಕಾಣಿಸಿಕೊಳ್ಳುತ್ತಾಳೆ. ಪ್ರಾಚೀನ ಕಾಲದಿಂದಲೂ ಕೆಲವು ನಾಗರಿಕತೆಗೆ ಕೃಷ್ಣಸುಂದರಿಯ ಬಗ್ಗೆ ತಿಳಿದಿತ್ತು. ಸಾವಿರಾರು ವರ್ಷಗಳ ಹಿಂದೆ, ಈಜಿಪ್ಟ್ ದೇಶದ ಜನರು ಔಷಧಕ್ಕಾಗಿ ಬಳಸುತ್ತಿದ್ದರು.

ಈ ಕೃಷ್ಣಸುಂದರಿಯನ್ನು ವಿಶ್ವಕ್ಕೆ ಪರಿಚಯಿಸಿ ಒಳ್ಳೆಯದಾಯಿತು ಎನ್ನುವವರು ಇಗ್ನಸಿ ಲುಕಾ ಸವಿಚ್, ಎಡ್ವಿನ್ ಡ್ರೇಕ್ ಮತ್ತು ಅಬ್ರಹಾಂ ಜೆಸ್ನರ್ ಅವರನ್ನು ಅಭಿನಂದಿಸಬೇಕು. ಅದರಿಂದಾಗಿಯೇ ಇಂದು ವಿಶ್ವದಲ್ಲಿ ತೊಂದರೆಗಳಾಗುತ್ತಿವೆ ಎನ್ನುವವರು ಇವರನ್ನೇ ಬೈಯ್ಯಬೇಕು.

ಏಕೆಂದರೆ, ಇವರು ಹುಟ್ಟುವುದಕ್ಕಿಂತ ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದ ಕೃಷ್ಣಸುಂದರಿಯನ್ನು ನಮ್ಮ ಪ್ರಪಂಚಕ್ಕೆ ಈ ರೀತಿಯಲ್ಲಿ ಪರಿಚಯಿಸಿದವರು ಇವರುಗಳು. ಈಗಂತೂ ಅವಳಿಲ್ಲದೇ ಮನುಕುಲದ ಒಂದು ದಿನವೂ ಕಳೆಯುವುದಿಲ್ಲ. ಒಂದಂತೂ ನಿಜ, ದೊಡ್ಡ ಹೆಸರು ಮಾಡಿದ ವಿಶ್ವಸುಂದರಿಯರೂ ಕೃಷ್ಣಸುಂದರಿಯ ಮುಂದೆ ಫಲ. ಯಾರಪ್ಪಾ ಈ ಕೃಷ್ಣಸುಂದರಿ ಎಂದು ತಲೆಕೆಡಿಸಿಕೊಳ್ಳಬೇಡಿ. ನಮ್ಮ ನಿತ್ಯದ ಆಗುಹೋಗುಗಳಿಗೆ ಅವಶ್ಯಕವಾದ ಈ ಸುಂದರಿಗೆ ಇನ್ನೊಂದು ಹೆಸರು ಕಚ್ಚಾತೈಲ.


ನಮ್ಮ ನಿತ್ಯದ ಬೇಡಿಕೆಯ ಪೆಟ್ರೋಲ, ಡೀಸೆಲ್, ಸೀಮೆ ಎಣ್ಣೆ, ಪ್ಲಾಸ್ಟಿಕ್ ಹೀಗೆ ಸುಮಾರು ಆರು ಸಾವಿರ ಶಿಶುಗಳಿಗೆ ಜನ್ಮದಾತೆ ಇದೇ ಕೃಷ್ಣಸುಂದರಿ, ಅಲಿಯಾಸ್ ಕ್ರೂಡ್ ಆಯಿಲ್ ಉರುಫ್ ಕಚ್ಚಾತೈಲ. ಈ ಕಚ್ಚಾತೈಲಾ ಅಥವಾ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಇಂದು ನಿನ್ನೆಯದಲ್ಲ.

ಸುಮಾರು 5000 ವರ್ಷದ ಹಿಂದಿನಿಂದ ಜನ



ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ಆಗೆಲ್ಲ ಬಳಕೆದಾರರು ಬಳಸುವ ಕಾರಣ, ವಿಧಾನ ಬೇರೆಯದಾಗಿತ್ತು. ಆ ಕಾಲದಲ್ಲಿ ಭೂಮಿಯನ್ನು ಅಗೆದು ಅಥವಾ ಕೊರೆದು ತೈಲವನ್ನು ಸಂಸ್ಕರಿಸಲು ಸಾಧ್ಯವಾಗುತ್ತಿರಲಿಲ್ಲ. ಅವರ ಬಳಿ ಆ ತಂತ್ರಜ್ಞಾನ ಇರಲಿಲ್ಲ. ಆದ್ದರಿಂದ ಅವರು ತೈಲ ಸೋರಿಕೆಯನ್ನು ಅವಲಂಬಿಸಿದ್ದರು.

ಅಂದರೆ, ಭೂಮಿಯ ಕೆಲವು ಭಾಗಗಳಲ್ಲಿ ಕಚ್ಚಾತೈಲ





ತಾನಾಗಿಯೇ ಮೇಲೆ ಬರುತ್ತಿತ್ತು. ಅಂಥ ಸ್ಥಳಗಳಲ್ಲಿ ಮೊದಲಾಗಿ ಗುರುತಿಸಲ್ಪಟ್ಟದ್ದು ಇರಾಕ್‌ನ ಹೀತ್ ಎಂಬ ಪ್ರದೇಶ. ಭೂಮಿಯಿಂದ ಮೇಲೆ ಒಸರಿ ಬರುತ್ತಿದ್ದ ಕಚ್ಚಾತೈಲ ಕೆಲವೊಮ್ಮೆ ಕಪ್ಪು ಜಿಗುಟಾದ ದ್ರವದಂತೆ ಕಂಡರೆ ಕೆಲವೊಮ್ಮೆ ಉಂಡೆಯಂತೆ, ಇನ್ನು ಕೆಲವೊಮ್ಮೆ ಘನ ದ್ರವ್ಯರಾಶಿಯಾಗಿ ದೊರಕುತ್ತಿತ್ತು.

ಪ್ರಾಚೀನ ನಾಗರಿಕತೆಯಲ್ಲಿ ಇದನ್ನು ಹಲವು ಕಡೆಗಳಲ್ಲಿ ಬಳಸಿದ ದಾಖಲೆಗಳಿವೆ. ನೂರಾರು ವರ್ಷಗಳ ಹಿಂದೆ ಈಜಿಪ್ಟ್‌ನಲ್ಲಿ ಜನರು ಕಚ್ಚಾತೈಲವನ್ನು ಔಷಧವಾಗಿ ಬಳಸುತ್ತಿದ್ದರು. ದೇಹದ ಮೇಲೆ ಗಾಯಗಳಾದರೆ ಅದಕ್ಕೆ ಈ ಕಚ್ಚಾತೈಲವನ್ನು ಸವರುವುದರಿಂದ ಗಾಯ ಬೇಗನೆ ವಾಸಿಯಾಗುತ್ತದೆ ಎಂದು ಅವರು ನಂಬಿದ್ದರು.

ಇದರಲ್ಲಿಯೇ ಸ್ವಲ್ಪ ಗಟ್ಟಿಯಾಗಿರುವ ತೈಲವನ್ನು ಅವರು ವಸ್ತುಗಳನ್ನು ಜೋಡಿಸಲು ಅಂಟಿನಂತೆ ಬಳಸುತ್ತಿದ್ದರು. ಪಿರಮಿಡ್‌ಗಳನ್ನು ಕಟ್ಟುವಾಗಲೂ ಇದನ್ನು ಬಳಸಿದ ದಾಖಲೆಗಳಿವೆ. ಬ್ಯಾಬಿಲೋನಿಯನ್ನರು ತಮ್ಮ ಹಡಗುಗಳಲ್ಲಿ ಸೋರಿಕೆಯನ್ನು ಸರಿಪಡಿಸಲು ಇದನ್ನು ಬಳಸುತ್ತಿದ್ದರು. ಒಟಾಮನ್ ಕಾಲದಲ್ಲಿ ಆಭರಣಗಳನ್ನು ಸರಿಪಡಿಸಲು ಇದರ ಬಳಕೆಯಾಗಿದೆ. ಮೆಸಪಟೊಮಿಯನ್ ಕಾಲದಲ್ಲಿಯೂ ಇದನ್ನು ಅಂಟಿನ ರೂಪದಲ್ಲಿ ಬಳಸುತ್ತಿದ್ದರು ಎಂಬ ಪುರಾವೆಗಳಿವೆ.

ಇತ್ತ ಚೀನಾದಲ್ಲಿ ಸಹ ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಕಚ್ಚಾತೈಲವನ್ನು ಬಳಸಿದ ದಾಖಲೆ ಇದೆ. ಬಿದಿರಿನ ಕೊಳವೆಗಳ ಮೂಲಕ ತಮ್ಮ ಮನೆಯಲ್ಲಿ ಬೆಳಕು ಮತ್ತು ಶಾಖಕ್ಕೋಸ್ಕರ ಇದನ್ನು ಬಳಸಿದ್ದರು. ಈ ಕಚ್ಚಾತೈಲವನ್ನು ಸುಲಭವಾಗಿ ಸುಡಬಹುದು ಎಂಬುದನ್ನು ಅವರು ಕಂಡುಕೊಂಡಿದ್ದರು. ಆ ಕಾಲದಲ್ಲಿ ಅವರು ಸುಮಾರು ಇನ್ನೂರ ಐವತ್ತು ಮೀಟರ್ ಆಳದ ಬಾವಿಯನ್ನು ತೋಡಿದ್ದರು.

ಏಳನೇ ಶತಮಾನದಲ್ಲಿ ಜಪಾನ್ ದೇಶದವರು ಕಚ್ಚಾತೈಲವನ್ನು ಗುರುತಿಸಿದರು. ಹದಿಮೂರನೆಯ ಶತಮಾನದಲ್ಲಿ ಇಟಲಿಯ ಮಾರ್ಕೊ ಪೋಲೊ ಜಗತ್ತನ್ನು ಸುತ್ತುತ್ತಿದ್ದಾಗ ಕ್ಯಾಸ್ಪಿಯನ್ ಸಮುದ್ರದ ತೀರದಲ್ಲಿರುವ ಬಾಕು (ಅಜರ್ಬೈಜಾನ್ ದೇಶದ ರಾಜಧಾನಿ, ಒಂದು ಕಾಲದಲ್ಲಿ ರಷ್ಯಾದ ಭಾಗವಾಗಿತ್ತು) ಸುತ್ತಮುತ್ತ ಇದೇ ರೀತಿಯ ಕಚಾತೈಲವನ್ನು ಕಂಡಿದ್ದನಂತೆ. ಇದೆಲ್ಲದರ ಹೊರತಾಗಿಯೂ ಕಚ್ಚಾ ತೈಲವನ್ನು ಹದಿನೈದನೇ ಶತಮಾನದವರೆಗೂ ದೊಡ್ಡ ಪ್ರಮಾಣದಲ್ಲಿ ಎಲ್ಲಿಯೂ ಬಳಸುತ್ತಿರಲಿಲ್ಲ.

ಅಲ್ಲಿಯವರೆಗೂ ಜನರು ಸಾಲ್ಮನ್ ಮೀನು ಮತ್ತು ಪೆಟ್ರಲ್ ಪಕ್ಷಿಗಳನ್ನು ಹಿಡಿದು ತಂದು, ಅದನ್ನು ಹಲವಾರು ದಿನಗಳವರೆಗೆ ಬಿಸಿಲಿನಲ್ಲಿ ಒಣಗಿಸಿ ಇಟ್ಟುಕೊಳ್ಳುತ್ತಿದ್ದರು. ಬೆಳಕು ಬೇಕು ಎಂದಾಗ ಇದನ್ನೇ ಮೇಣದಬತ್ತಿಯಂತೆ ಸುಡುತ್ತಿದ್ದರು.

ನಂತರದ ದಿನಗಳಲ್ಲಿ ತಿಮಿಂಗಲಗಳನ್ನು ಹಿಡಿದು ಅದರಿಂದ ಎಣ್ಣೆ ತೆಗೆಯಲು ಆರಂಭಿಸಿದರು. ಒಂದೇ ಸಮನೆ ತಿಮಿಂಗಿಲದಿಂದ ಎಣ್ಣೆ ತೆಗೆಯುವ ಕಾರ್ಖಾನೆಗಳು ತಲೆಯೆತ್ತಿದವು. ಈ ಎಣ್ಣೆಯನ್ನು ದೀಪ ಬೆಳಗಿಸಲು ಮತ್ತು ಸುಗಂಧದ ದ್ರವ್ಯಗಳನ್ನು ತಯಾರಿಸಲು ಬಳಸಲಾಗುತ್ತಿತ್ತು. ಆ ಕಾಲದಲ್ಲಿ ಅಮೆರಿಕದ ಹೆಚ್ಚಿನ ಹಡಗುಗಳು ಸಮುದ್ರದಲ್ಲಿ ತಿಮಿಂಗಲಗಳನ್ನು ಹುಡುಕುವುದರಲ್ಲಿ ನಿರತವಾಗಿರುತ್ತಿದ್ದವು.

ಹತ್ತೊಂಬತ್ತನೇ ಶತಮಾನದ ಮಧ್ಯ ಭಾಗದಲ್ಲಿ ಕೆನಡಾದ ಭೂವಿನಿ ಅಬ್ರಹಾಮ್ ಜಸ್ನರ್ ದೀಪ ಬೆಳಗಲು ಹೊಸ ತೈಲವನ್ನು ಕಂಡುಹಿಡಿಯುವವರೆಗೂ ಇದು ಅಮೆರಿಕದ ಐದನೇ ಅತಿ ದೊಡ್ಡ ಉದ್ಯಮವಾಗಿತ್ತು. 1854ರ ಹೊತ್ತಿಗೆ ಪೋಲೆಂಡಿನ ಇಗ್ನಸಿ ಲುಕಾಸವಿಚ್ ವ್ಯಾಪಾರಕ್ಕಾಗಿ ಮೊದಲ ತೈಲ ಸಂಸ್ಕರಣಾ ಕೇಂದ್ರವನ್ನು ಸ್ಥಾಪಿಸಿದ. ಆದರೆ ತೈಲವನ್ನು ಭೂಮಿಯಿಂದ ಹೊರಗೆ ತೆಗೆಯುವುದು ಮಾತ್ರ ದೊಡ್ಡ ಸಮಸ್ಯೆಯಾಗಿಯೇ ಉಳಿದಿತ್ತು.

ಕೆಲವೇ ವರ್ಷಗಳಲ್ಲಿ ಸಾಕಷ್ಟು ತೈಲ ಸಂಸ್ಕರಿಸುವ ಕಾರ್ಖಾನೆಗಳು ಹುಟ್ಟಿಕೊಂಡಿದ್ದವು. ಹತ್ತು-ಇಪ್ಪತ್ತು ಫೂಟುಗಳವರೆಗೆ ಕೊರೆಯುವುದಕ್ಕೆ ತೊಂದರೆ ಇರಲಿಲ್ಲ. ಆದರೆ ಅದಕ್ಕಿಂತ ಹೆಚ್ಚು ಆಳಕ್ಕೆ ಹೋಗಲು ಎಲ್ಲರೂ ವಿಧಾನಗಳನ್ನು ಹುಡುಕುತ್ತಿದ್ದರು. ಈ ಸಮಸ್ಯೆಗೆ ಪರಿಹಾರ ಹುಡುಕಿದವ ಎಡ್ವಿನ್ ಡ್ರೇಕ್. ಮೂಲತಃ ಉದ್ಯಮಿಯಾಗಿದ್ದ ಡ್ರೇಕ್ ಕಚ್ಚಾ ತೈಲದ ಬಗ್ಗೆ ಸಾಕಷ್ಟು ತಿಳುವಳಿಕೆ ಇತ್ತು. ಆದರೆ ಕಾರಣಾಂತರಗಳಿಂದ ಆತ ಕಚ್ಚಾ ತೈಲದ ವ್ಯಾಪಾರ





ಮಾಡುವಂತಿರಲಿಲ್ಲ.

ಆದ್ದರಿಂದ ಒಂದು ಸಾವಿರ ಡಾಲರ್ ಸಂಬಳಕ್ಕೆ ಆತ ತೈಲ ತೆಗೆಯುವ ಸಂಸ್ಥೆಗೆ ಕೆಲಸ ಮಾಡಬೇಕಾಯಿತು. 1859 ರ ವೇಳೆಗೆ, ಮೊದಲು ಕಬ್ಬಿಣದ ಕೊಳವೆಗಳನ್ನು ಭೂಮಿಯೊಳಗೆ ಇಳಿಸಿ ಅದರ ಒಳಗೆ ಉಗಿಯಂತ್ರದ ಸಹಾಯದಿಂದ ಸರಳು ಬಳಸಿ ಬಾವಿ ಕೊರೆಯುವ ಪ್ರಯತ್ನ ಮಾಡಿದ. ಆದರೂ ದಿನಕ್ಕೆ ಮೂರು ಅಡಿಗಿಂತ ಹೆಚ್ಚು ಕೊರೆಯಲು ಸಾಧ್ಯವಾಗುತ್ತಿರಲಿಲ್ಲ.

ಕೆಲವರು ಇದನ್ನು ಹುಚ್ಚುತನ ಎಂದರು. ಆದರೆ ಎಪ್ಪತ್ತು ಅಡಿ ಕೊರೆದ ಡ್ರೇಕ್ ನಂತರ ತೈಲ ನಿಕ್ಷೇಪವನ್ನು ತಲುಪಿದ್ದ. ಇದರಿಂದ ಡ್ರೇಕೆಗೆ ಹೆಸರು ಬಂತಾದರೂ ಹಣ ಬರಲಿಲ್ಲ. ಆತನ ಕೊನೆಯ ಕಾಲದಲ್ಲಿ ಕೈಯಲ್ಲಿ ಸ್ವಲ್ಪವೂ ಹಣ ಇರಲಿಲ್ಲ. ಅಲ್ಲಿಂದ ಶುರುವಾಯಿತು ನೋಡಿ ತೈಲದ ಹಾರಾಟ. ಎಲ್ಲರೂ ತೈಲದ ಹಿಂದೆ ಓಡುವವರೇ.

ಅಮೆರಿಕದಲ್ಲಂತೂ ತೈಲವೇ ತೈಲ. ಅದಕ್ಕೆ ಬ್ರಿಟಿಷರೂ ಕಮ್ಮಿ ಇರಲಿಲ್ಲ. ವಿಶ್ವದಾದ್ಯಂತ ತೈಲ ನಿಕ್ಷೇಪದ ಬೇಟೆ ಆರಂಭವಾಯಿತು. ಅಮೆರಿಕ ಮತ್ತು ಯುರೋಪ್ ದೇಶಗಳು ಭೂಪಟದಲ್ಲಿರುವ ಎಲ್ಲ ದೇಶಗಳನ್ನೂ (ರಷ್ಯಾ, ಚೀನಾ ಹೊರತುಪಡಿಸಿ) ಜಾಲಾಡಿದವು. ಎರಡನೇ ಮಹಾಯುದ್ಧದ ಸಮಯದಲ್ಲಂತೂ ಕೇಳುವುದೇ ಬೇಡ. ಸಾವಿರಾರು ವಾಹನಗಳು, ಟ್ಯಾಂಕರ್‌ಗಳು, ನೂರಾರು ಯುದ್ಧ ವಿಮಾನಗಳು, ಫಿರಂಗಿಗಳು, ಎಲ್ಲದಕ್ಕೂ ತೈಲದ ಅವಶ್ಯಕತೆ ಇತ್ತು.

ಅಮೆರಿಕ ಮತ್ತು ಯುರೋಪ್ ರಾಷ್ಟ್ರದ ಕಣ್ಣು ಅರಬ್ ರಾಷ್ಟ್ರಗಳ ಕಡೆಗೆ ತಿರುಗಿತ್ತು. ಕೊಲ್ಲಿ ರಾಷ್ಟ್ರಗಳಲ್ಲಿ ಮೊದಲ ಬಾರಿ ಬಹರೈನ್‌ನಲ್ಲಿ ತೈಲ ನಿಕ್ಷೇಪವನ್ನು ಬ್ರಿಟಿಷರು ಕಂಡುಹಿಡಿದರು. ಪಕ್ಕದಲ್ಲಿರುವ ದೊಡ್ಡ ದೇಶವಾದ ಸೌದಿ ಅರೇಬಿಯಾದಲ್ಲೂ ತೈಲ ನಿಕ್ಷೇಪ ಇರಬಹುದೆಂದು ಅಂದಿನ ರಾಜ ಬ್ರಿಟಿಷ್ ಕಂಪನಿಯನ್ನು ಕೇಳಿಕೊಂಡಾಗ, ಹೆಚ್ಚಿನ ಲಾಭದ ಆಸೆಗೆ ಬ್ರಿಟಿಷರು ಕೆಲವು ಬೇಡಿಕೆಯನ್ನು ಇಟ್ಟರು.

ಆಗ ಅಲ್ಲಿಯ ರಾಜನಾಗಿದ್ದ ಅಬ್ದುಲ್ ಅಜೀಜ್ ಅಮೆರಿಕದ ಕಂಪನಿಯೊಂದಿಗೆ ಮಾತುಕತೆ ನಡೆಸಿ, ಸೌದಿ ಅರೇಬಿಯಾದಲ್ಲಿಯೂ ತೈಲ ಹುಡುಕುವ ಮತ್ತು ಬಾವಿ ಕೊರೆಯುವ ಕೆಲಸಕ್ಕೆ ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಂಡರು. ಸೌದಿ ಅರೇಬಿಯಾದಲ್ಲಿ ಅಮೆರಿಕಕ್ಕೆ ಹೆಚ್ಚಿನ ಯಶಸ್ಸು ಲಭಿಸಿತು.

ಒಂದೊಂದು ಬಾವಿಯೂ ಸಾವಿರ ಬ್ಯಾರೆಲ್‌ಗಿಂತ ಹೆಚ್ಚು ತೈಲವನ್ನು ಉತ್ಪಾದಿಸುತ್ತಿತ್ತು. ಸೌದಿ ಅರೇಬಿಯಾದ ಪೂರ್ವಭಾಗದಲ್ಲಿ ವರ್ಷ ಒಪ್ಪೊತ್ತಿನಲ್ಲಿಯೇ ನೂರಾರು ತೈಲದ ಬಾವಿಯನ್ನು ಕೊರೆದರು. ಪೈಪ್‌ಲೈನ್ ಮೂಲಕ ಬಂದರಿನ ಹತ್ತಿರದ ಸಂಸ್ಕರಣಾ ಕೇಂದ್ರಕ್ಕೆ ಕೊಂಡೊಯ್ದರು. ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಈ ಕಪ್ಪು ದ್ರವ ಹೆಚ್ಚಿನ ದ್ರವ್ಯ ತಂದುಕೊಡುತ್ತದೆ ಎಂದು ಎಲ್ಲರಿಗೂ ಸ್ಪಷ್ಟವಾಗಿತ್ತು. ಅಲ್ಲಿ ರಾಜಕೀಯ ಉದ್ದೇಶ, ದುರುದ್ದೇಶಗಳು ಸೇರಿಕೊಂಡವು.


ಆ ಕಾಲದಲ್ಲಿದ್ದ ಪ್ರಸಿದ್ಧ ಭೂವಿಜ್ಞಾನಿ ಎವರೆಟ್ ಡಿ ಗ್ಯಾಲಿಯರ್ ಅಮೆರಿಕಕ್ಕೆ ಒಂದು ವರದಿಯನ್ನು ಸಲ್ಲಿಸಿದರು. ಪಶ್ಚಿಮ ಏಷ್ಯಾದಲ್ಲಿ ಇಪ್ಪತ್ತೈದು ಬಿಲಿಯನ್ ಬ್ಯಾರೆಲ್ ಕಚ್ಚಾ ತೈಲದ ನಿಕ್ಷೇಪ ಇದೆ ಎಂದು ಹೇಳಿದರು. ಅಮೆರಿಕಕ್ಕೆ ಅದನ್ನು ಬಿಡಲು ಸಾಧ್ಯವಾಗಲಿಲ್ಲ. ತೈಲದ ಕ್ಷೇತ್ರಗಳನ್ನು ನಿಯಂತ್ರಿಸಲು ಅವರು ಎಲ್ಲ ತಂತ್ರಗಳನ್ನೂ ಬಳಸಿದರು. ಆ ಕಾಲದಲ್ಲಿ ಜಾಗತಿಕವಾಗಿ ಏಳು ಕಂಪನಿಗಳು ತೈಲ ಉದ್ಯಮದಲ್ಲಿ ಪ್ರಾಬಲ್ಯ ಹೊಂದಿದ್ದವು.

ಗಲ್ಫ್ ಆಯಿಲ್, ಶೆಲ್, ಆಂಗ್ಲೋ ಇರಾನಿಯನ್ ಆಯಿಲ್ ಕಂಪನಿ, ಸ್ಟ್ಯಾಂಡರ್ಡ್ ಆಯಿಲ್, ಕ್ಯಾಲಿಫೋರ್ನಿಯಾ ಆಯಿಲ್, ನ್ಯೂಜೆರ್ಸಿ ಸ್ಟ್ಯಾಂಡರ್ಡ್ ಆಯಿಲ್, ನ್ಯೂಯಾರ್ಕ್ ಆಯಿಲ್, ಹೀಗೆ ಏಳು ಕಂಪನಿಗಳನ್ನು ಸೆವೆನ್ ಸಿಸ್ಟರ್ಸ್ ಎಂದು ಕರೆಯಲಾಗುತ್ತಿತ್ತು. ಇರಲಿ, ಹೆಚ್ಚಿನ ತೈಲ ದೊರೆತದ್ದರಿಂದ ಕೊಲ್ಲಿ ರಾಷ್ಟ್ರಗಳು ಶ್ರೀಮಂತವಾದವು. ಮರುಭೂಮಿಯ ಮಧ್ಯದಲ್ಲಿ ಮಹಾ ನಗರಗಳು ತಲೆಯೆತ್ತಿದವು.

ಆದರೆ 1950ರ ದಶಕದಲ್ಲಿ ಇರಾನ್ ತನ್ನ ತೈಲ ಉದ್ಯಮವನ್ನು ರಾಷ್ಟ್ರೀಕರಣಗೊಳಿಸಲು ಪ್ರಯತ್ನಿಸಿತು. ಪಶ್ಚಿಮ ದೇಶಗಳು ಸೇರಿ ಇರಾನ್ ಸರ್ಕಾರವನ್ನೇ ಉರುಳಿಸಿದವು. ಬಹುತೇಕ ಕೊಲ್ಲಿ ರಾಷ್ಟ್ರಗಳು ಅಮೆರಿಕ ಮತ್ತು ಬ್ರಿಟನ್ ಕಂಪನಿಗಳೊಂದಿಗೆ ಪಾಲುದಾರರಾಗಿ ಒಪ್ಪಂದ ಮಾಡಿ ಕೊಂಡವು. ಆದರೆ ಇರಾನ್ ಇದಕ್ಕೆ ಹೊರತಾಗಿತ್ತು.

ನಂತರದ ದಿನಗಳಲ್ಲೂ ಇರಾನ್ ಸ್ವತಂತ್ರವಾಗಿ ಇರಬೇಕೆಂದು ಬಯಸಿತ್ತು. ಆದ್ದರಿಂದ ಇರಾನ್ ಮೇಲೆ ನಿರ್ಬಂಧವನ್ನು ಹೇರಲಾಯಿತು. ಇಂದಿಗೂ ಅಮೆರಿಕಕ್ಕೆ ಕೊಲ್ಲಿ ರಾಷ್ಟ್ರಗಳ ಮೇಲೆ ಯಾಕೆ ಇಷ್ಟು ಆಸಕ್ತಿ ಎಂದು ಈಗ ಅರ್ಥವಾಯಿತು ಅಲ್ಲವೇ? ರಾತ್ರೋರಾತ್ರಿ ವೆನೆಝುವೇಲಾದ ಅಧ್ಯಕ್ಷರನ್ನು ಅಮೆರಿಕ ಏಕೆ ಹಾರಿಸಿಕೊಂಡು ಹೋಯಿತು? ಅಮೆರಿಕ ಮತ್ತು ಇಸ್ರೇಲ್, ಇರಾನ್ ವಿರುದ್ಧ ಯುದ್ಧಕ್ಕೆ ಇಳಿಯಲು ಕಾರಣ ಏನು? ಹೆಚ್ಚು ಬಿಡಿಸಿ ಹೇಳಬೇಕಾಗಿಲ್ಲ. ಏನೇ ಹೇಳಿ, ಈ ಕಪ್ಪು ಬಣ್ಣದ ಕಚ್ಚಾ ತೈಲ ಇಡೀ ಜಗತ್ತಿನ ಕಣ್ಣಿಗೆ ತಂಪನ್ನೂ ನೀಡಿದೆ, ಕಣ್ಣು ಕೆಂಪಾಗುವಂತೆಯೂ ಮಾಡಿದೆ.

**– ಕಿರಣ್ ಉಪಾಧ್ಯಾಯ,**
ಬಹ್ರೈನ್





# ರಾಮಚರಿತ ಮಾನಸ: ಲಂಕಾದಹನ- ಅಧರ್ಮದ ಸೌಧಕ್ಕೆ ಬಿದ್ದ ಕಿಚ್ಚು

ಒಂದೊಳ್ಳೆ ಮಾತು

ರಾವಣನ ಸಭೆಯಲ್ಲಿ ಹನುಮಂತನು ನೀಡಿದ ಹಿತವಚನಗಳು ಶಾಂತಿಯ ಮಂತ್ರಗಳಾಗಿದ್ದವು. ರಾವಣನೇ, ವೈರವನ್ನು ಬಿಡು, ಶರಣಾಗತಿಯಲ್ಲಿ ಸುಖವಿದೆ ಎಂದು ಹನುಮಂತನು ಕಳಕಳಿಯಿಂದ ಹೇಳಿದಾಗ, ಅಹಂಕಾರದ ಶಿಖರದಲ್ಲಿದ್ದ ರಾವಣನಿಗೆ ಅದು ಅವಮಾನವಾಗಿ ಕಂಡಿತು. ಹಿತವನ್ನು ಹೇಳುವವನು ಶತ್ರುವಿನಂತೆ ಭಾಸವಾಗುವುದು ವಿನಾಶದ ಲಕ್ಷಣ.

ಕ್ರೋಧದಿಂದ ಗುಡುಗಿದ ರಾವಣನು, ಈ ವಾನರನಿಗೆ ಮೃತ್ಯುವಿನ ಭಯವಿಲ್ಲ, ಇವನ ಬಾಲಕ್ಕೆ ಬೆಂಕಿ ಹಚ್ಚಿ ಮೆರವಣಿಗೆ ಮಾಡಿ. ತನ್ನ ಸುಟ್ಟ ಬಾಲದೊಂದಿಗೆ ಈತ ಮರಳಿ ಹೋಗಿ ತನ್ನ ಒಡೆಯನಿಗೆ ನನ್ನ ಪ್ರತಾಪವನ್ನು ತಿಳಿಸಲಿ ಎಂದು ಆಜ್ಞಾಪಿಸಿದನು.

ರಾಕ್ಷಸರು ಹರ್ಷೋದ್ಗಾರ ಮಾಡುತ್ತಾ ಹನುಮಂತನ ಬಾಲಕ್ಕೆ ಬಟ್ಟೆಗಳನ್ನು ಸುತ್ತಲು ಆರಂಭಿಸಿದರು. ಆದರೆ ಹನುಮಂತನು ತನ್ನ ದೈವೀ ಶಕ್ತಿಯಿಂದ ಬಾಲವನ್ನು ಬೆಳೆಸುತ್ತಲೇ ಹೋದನು. ಲಂಕೆಯಲ್ಲಿದ್ದ ಸಮಸ್ತ ವಸ್ತ್ರಗಳು ಮುಗಿದವು, ಮಡಕೆಗಟ್ಟಲೆ ಎಣ್ಣೆ ಖಾಲಿಯಾಯಿತು, ಆದರೂ ಬಾಲದ ತುದಿಯೇ ಸಿಗದಂತಾಯಿತು! ಕೊನೆಗೆ ಬಾಲಕ್ಕೆ ಬೆಂಕಿ ಹಚ್ಚಿದಾಗ, ಹನುಮಂತನು ತನ್ನನ್ನು ಕಟ್ಟಲ್ಪಟ್ಟಿದ್ದ ಪಾಶಗಳನ್ನು ಕಿತ್ತೆಸೆದು ಆಕಾಶಕ್ಕೆ ಜಿಗಿದನು.

ಆ ಕ್ಷಣದ ಭೀಕರತೆಯನ್ನು ತುಳಸೀ ದಾಸರು ಹೀಗೆ ವರ್ಣಿಸುತ್ತಾರೆ:

ಹರಿ ಪ್ರೇರಿತ ತೇಹಿ ಅವಸರ ಚಲೇ ಮರುತ ಚಲಿಸಾತ
ಅಟ್ಟಹಾಸ ಕರಿ ಗರ್ಜಾ ಕಪಿ ಬಢಿ ಲಾಗ ಆಕಾಶ

ಭಗವಂತನ ಇಚ್ಛೆಯಂತೆ, ಹನುಮಂತನ ತಂದೆಯಾದ ವಾಯುದೇವನು ಪ್ರಚಂಡವಾಗಿ ಬೀಸಲು ಶುರು ಮಾಡಿದನು. ಹನುಮಂತನು ಅಟ್ಟಹಾಸ ಮಾಡುತ್ತಾ ಲಂಕೆಯ ಒಂದೊಂದು ಮಹಲಿನ ಮೇಲೆ ಹಾರುತ್ತಾ ಬೆಂಕಿಯನ್ನಿಟ್ಟನು.

ಚಿನ್ನದ ಲಂಕೆ ಕ್ಷಣಾರ್ಧದಲ್ಲಿ ಬೆಂಕಿಯ ಜ್ವಾಲೆಗೆ ಸಿಲುಕಿತು. ರಾಕ್ಷಸರ ಆಕ್ರಂದನ ಮುಗಿಲು ಮುಟ್ಟಿತು. ಅಧರ್ಮದಿಂದ ಕಟ್ಟಿದ ಸಾಮ್ರಾಜ್ಯವು ಭಕ್ತಿಯ ಕಿಚ್ಚಿಗೆ ಆಹುತಿಯಾಗುತ್ತಿತ್ತು. ರಾವಣನು ದೇವತೆಗಳನ್ನು ಗೆದ್ದು ತಂದಿದ್ದ ಅಹಂಕಾರದ ಸೌಧಗಳು ಸುಟ್ಟು ಬೂದಿಯಾಗುತ್ತಿದ್ದವು.

ಆದರೆ ಈ ಮಹಾವಿನಾಶದ ನಡುವೆಯೂ ಹನುಮಂತನ ಹೃದಯದಲ್ಲಿ ಕರುಣೆಯಿತ್ತು. ಅವನು ಸಜ್ಜನ ವಿಭೀಷಣನ ಮನೆಗೆ ಬೆಂಕಿ ತಗುಲದಂತೆ ನೋಡಿಕೊಂಡನು. ಅತ್ತ ಅಶೋಕವನದಲ್ಲಿ ತಾಯಿ ಸೀತೆಯಿದ್ದ ಜಾಗಕ್ಕೂ ಕಿಂಚಿತ್ತೂ ಹಾನಿಯಾಗಲಿಲ್ಲ. ಇದು ಸತ್ಸಂಗ ಮತ್ತು ಭಕ್ತಿಯ ಮಹಿಮೆ; ಇಡೀ ನಗರವೇ ಸುಡುತ್ತಿದ್ದರೂ ಭಕ್ತನ ಮನೆಯ ಮೇಲೆ ದೇವರ ಕೃಪೆಯೆಂಬ ತಂಪು ಮಳೆಯಿತ್ತು.

ಹನುಮಂತನಿಗೆ ಈ ಲಂಕಾದಹನವು ಕೇವಲ ಸೇಡಿನ

**ಹನುಮಂತನಿಗೆ ಈ ಲಂಕಾದಹನವು ಕೇವಲ ಸೇಡಿನ ಕ್ರಮವಾಗಿರಲಿಲ್ಲ, ಅದು ಸೀತೆಯ ಕಣ್ಣೀರಿಗೆ ನೀಡಿದ ಉತ್ತರವಾಗಿತ್ತು. ಕೊನೆಗೆ ಹನುಮಂತನು ಸಮುದ್ರಕ್ಕೆ ಹಾರಿ ತನ್ನ ಬಾಲವನ್ನು ಆರಿಸಿ ಕೊಂಡನು. ಸುಟ್ಟು ಕರಕಲಾದ ಲಂಕೆಯನ್ನು ನೋಡಿದಾಗ ಅವನಿಗೆ ಮರುಕ ಉಂಟಾಗಲಿಲ್ಲ, ಬದಲಾಗಿ ಅಹಂಕಾರದ ಅಂತ್ಯ ಹೀಗೆಯೇ ಇರುತ್ತದೆ ಎಂಬ ಸತ್ಯದ ದರ್ಶನವಾಯಿತು.**

ಕ್ರಮವಾಗಿರಲಿಲ್ಲ, ಅದು ಸೀತೆಯ ಕಣ್ಣೀರಿಗೆ ನೀಡಿದ ಉತ್ತರವಾಗಿತ್ತು. ಕೊನೆಗೆ ಹನುಮಂತನು ಸಮುದ್ರಕ್ಕೆ ಹಾರಿ ತನ್ನ ಬಾಲವನ್ನು ಆರಿಸಿ ಕೊಂಡನು. ಸುಟ್ಟು ಕರಕಲಾದ ಲಂಕೆಯನ್ನು ನೋಡಿದಾಗ ಅವನಿಗೆ ಮರುಕ ಉಂಟಾಗಲಿಲ್ಲ, ಬದಲಾಗಿ ಅಹಂಕಾರದ ಅಂತ್ಯ ಹೀಗೆಯೇ ಇರುತ್ತದೆ ಎಂಬ ಸತ್ಯದ ದರ್ಶನವಾಯಿತು.

ತನ್ನ ಕಾರ್ಯ ಮುಗಿಸಿ, ಪುನಃ ಸೀತೆಯ ಬಳಿಗೆ ಹೋಗಿ ನಮಸ್ಕರಿಸಿದಾಗ ಅವನ ಮುಖದಲ್ಲಿ ರಾಮಕಾರ್ಯ ಮಾಡಿದ ತೃಪ್ತಿಯಿತ್ತು. ಅಧರ್ಮದ ನೆಲೆಗೆ ಭಕ್ತಿಯ ಕಿಚ್ಚು ತಗುಲಿದಾಗ ಅದು ಹೇಗೆ ಭಸ್ಮವಾಗುತ್ತದೆ ಎಂಬುದಕ್ಕೆ ಲಂಕಾದಹನವೇ ಶಾಶ್ವತ ಸಾಕ್ಷಿ.

ಕೆಲವೊಮ್ಮೆ ನಮ್ಮ ಸಾತ್ವಿಕತೆ, ಒಳ್ಳೆಯತನ, ಮೌನವನ್ನು ನಮ್ಮ ದೌರ್ಬಲ್ಯ ಎಂದು ಜನರು ತಿಳಿದುಕೊಳ್ಳುತ್ತಾರೆ. ಆದರೆ ಮೌನದ ಹಿಂದಿರುವ ತೀವ್ರತೆ, ಸಾತ್ವಿಕತೆಯ ಹಿಂದಿರುವ ಶಕ್ತಿಯನ್ನು ಅವರು ನೋಡದೆ ಹೋಗುತ್ತಾರೆ. ಸಾತ್ವಿಕ ವ್ಯಕ್ತಿಯ ಸಿಟ್ಟು ಎದುರುಗಿರುವವರನ್ನು ಸುಟ್ಟು ಹಾಕುವಷ್ಟು ಶಕ್ತಿಯುತವಾಗಿರುತ್ತದೆ. ಅವರಿಗೆ ಅವರ ಶಕ್ತಿಯ ಪರಿಚಯವೂ ಇರುತ್ತದೆ. ಆದರೆ ಧರ್ಮ ಕರ್ಮಗಳನ್ನು ನಂಬಿ ಅವರು ಯಾರಿಗೂ ಕೆಡುಕು ಮಾಡದೆ ಒಳ್ಳೆಯತನದಿಂದ ಬದುಕುತ್ತಿರುತ್ತಾರೆ.

ಅದರ ಅರ್ಥ ಅವರು ಕೈಲಾಗದವರು ಎಂದಲ್ಲ. ಎಂದಾದರೂ ಅವರಿಗೆ ಅನ್ಯಾಯವಾದಾಗ, ಸಿಟ್ಟು ಬಂದಾಗ ಅವರನ್ನು ನೋಯಿಸಿದವರನ್ನು ಹುಟ್ಟಡಗಿಸಿ ಬಿಡುವ ಸಾಮರ್ಥ್ಯವೂ ಅವರಿಗೆ ಇರುತ್ತದೆ. ಆದ್ದರಿಂದಲೇ ಋಷಿ- ಮುನಿಗಳ, ಸಾತ್ವಿಕರ ಸಿಟ್ಟಿಗೆ ಎಂದಿಗೂ ಗುರಿಯಾಗಬಾರದು. ನಮ್ಮಲ್ಲಿ ಆ ಒಳ್ಳೆಯತನವಿದ್ದಾಗ ನಮ್ಮ ಶಕ್ತಿಯ ಬಗ್ಗೆಯೂ ನಮಗೆ ನಂಬಿಕೆ ಇರಬೇಕು. ಸಮಯ ಬಂದಾಗ ಅದನ್ನು ಪ್ರಯೋಗಿಸಲು ಹಿಂಜರಿಯಬಾರದು. ಒಳ್ಳೆಯವರಿಗೆ ಇರುವ ಸಾತ್ವಿಕ ಗತ್ತು ಅವರ ಗುರುತು, ಅದನ್ನು ಕೆಣಕಲು ಹೋಗಬಾರದು...

– **ರೂಪಾ** ಗುರುರಾಜ್



ಹೊರಸೂಸುವ ಮನ

ಏಪ್ರಿಲ್‌ನ ಉರಿಯುವ ಬೇಸಿಗೆಯಲ್ಲಿ, ಕಪ್ಪು ರಸ್ತೆಯ ಮೇಲಿನ ಡಾಂಬರು ಕರಗುವಷ್ಟು ಬಿಸಿಯಾಗಿರುವಾಗ, ಕಣ್ಣುಗಳು ಬಿಸಿಲಿನ ತಾಪದಿಂದ ತಪ್ಪಿಸಿಕೊಳ್ಳಲು ಸಣ್ಣದಾಗಿ ಮಿಟುಕಿಸುತ್ತಿದ್ದಾಗ, ಆ ಸಂಜೆ ನಡಿಗೆಯಲ್ಲಿ ನಿರಪರಾಧಿಯಾಗಿದ್ದ ನನ್ನ ಮೇಲೆ ಲ್ಯಾಬರ್ನಮ್ ಎಂಬ ಮರ ತನ್ನ ಬೀಜದ ಕೊಂಬೆಯನ್ನು ನನ್ನ ಮೇಲೆ ಬಿಸಾಡಿತು.

ಕೋಪದಿಂದ ಮೇಲಕ್ಕೆ ನೋಡಿದೆ... ಮೈತುಂಬಾ ಹಳದಿ ಬಣ್ಣದ ಬಂಗಾರದಂಥ ಹೂವುಗಳನ್ನು ಮುಡಿದುಕೊಂಡಿದ್ದ ಆ ಮರ ನನ್ನನ್ನು ನಗುತ್ತಾ ಸ್ವಾಗತಿಸಿತು. ನಂತರ, ಸಂಜೆಯ ಹೊತ್ತಿನಲ್ಲಿ ಸ್ಟಾರ್ಲಿಂಗ್ ಪಕ್ಷಿಗಳು ಆಕಾಶದಲ್ಲಿ ಅಲೆಗಳಂತೆ ಹಾರಾಡುತ್ತಿದ್ದಾಗ, ರಾತ್ರಿಗೆ ಅರಳಲು ಸಿದ್ಧವಾಗಿದ್ದ ಮಲ್ಲಿಗೆಯ ಸಣ್ಣ ಬಿಳಿ ಮೊಗ್ಗುಗಳನ್ನು ಕಂಡೆ; ಅದೇ ಸಮಯದಲ್ಲಿ ದಾಸವಾಳವು ತನ್ನ ದಿನದ ವ್ಯವಹಾರ ಮುಗಿಸಿಕೊಂಡಂತೆ ಮುದುಡಿಕೊಂಡಿತ್ತು.

ರವೀಂದ್ರನಾಥ ಟಾಗೋರ್ ಅವರು ಮಧುಬಿ ಎಂದು ಕವನ ಬರೆದ ಮಧುಮಾಲತಿ, ವಸಂತದ ನವ ಹೂವು, ಸುಗಂಧಭರಿತ ಹೂಗಳಿಂದ ತುಂಬಿಕೊಂಡಿತ್ತು. ಅವು ಆರಂಭದಲ್ಲಿ ಕ್ಷೀಣವಾದ ಬಿಳಿಯಾಗಿ ಕಾಣಿಸಿಕೊಂಡು, ಮೂರನೇ ದಿನಕ್ಕೆ ಗಾಢ ಕೆಂಪಿಗೆ ಮರುಳುತ್ತವೆ. ಇವು ದುಂಬಿಗಳಿಗೆ ಪರಾಗಸ್ಪರ್ಶಕ್ಕಾಗಿ ಆಕರ್ಷಿಸುತ್ತವೆ.

ವಸಂತಋತುವೆಂದರೆ ಅದು ಹೂಗಳ ಕಾಲ. ಮೊದಲಿಗೆ ಟ್ಯುಲಿಪ್ ಹೂವುಗಳ ಬಗ್ಗೆ ಮಾತನಾಡೋಣ. ಭೂಮಿಯ ಅತ್ಯಂತ ಸುಂದರ ಹೂವುಗಳಲ್ಲೊಂದು ಟ್ಯುಲಿಪ್. ವಸಂತ ಋತುವಿನಲ್ಲಿ ಹಾಲೆಂಡ್‌ನ ಆಮ್‌ಸ್ಟರ್ ಡ್ಯಾಂನಲ್ಲಿರುವ ಕ್ಯೂಕೆನ್‌ಹಾಫ್‌ನಿಂದ ಶ್ರೀನಗರದವರೆಗೆ ಟ್ಯುಲಿಪ್ ಹೂವುಗಳು ಅರಳಿ ನಿಲ್ಲುತ್ತವೆ.

ಹಸಿರು ನೆಲದ ಮೇಲೆ ಚಾದರ್ ಹಾಸಿದಂತೆ ಕಾಣುವ ಈ ಸುಂದರ ಹೂವುಗಳು ತಾವಿರುವ ಜಾಗವನ್ನು ಸ್ವರ್ಗದಂತೆ ಮಾರ್ಪಡಿಸುತ್ತವೆ. ಅವುಗಳ ಚೆಲುವಿಗೆ ಮಾರು ಹೋಗದವರಿಲ್ಲ. ಯೂರೋಪ್ ಜನರು ತುಂಬಾ ಇಷ್ಟಪಡುವ ಈ ಹೂವನ್ನು 16ನೇ ಶತಮಾನದಲ್ಲಿ ಯೂರೋಪಿಗೆ ಪರಿಚಯಿಸಿದ್ದು ಒಟ್ಟೊಮನ್ ರಾಜರು.

ಹಾಗಾಗಿ, ಟ್ಯುಲಿಪ್ ಹೂವುಗಳನ್ನು ಯೂರೋಪಿಯನ್ನು ಒಟ್ಟೊಮನ್ ರಾಜರ ಉಡುಗೊರೆ ಎಂದು ಈಗಲೂ ನೆನೆಯುತ್ತಾರೆ. ಟ್ಯೂಲಿಪ್ ಎಂಬ ಪದ ದುಲೇಬಂದ್ ಎಂಬ ತುರ್ಬಾನ್ ಆಗಿ ಬಳಸುವ ಬಟ್ಟೆಯಿಂದ ಬಂದದ್ದಾಗಿದೆ. 16ನೇ ಶತಮಾನದಲ್ಲಿ ಟ್ಯೂಲಿಪ್ ಹೂಗಳು ಕಳ್ಳತನಕ್ಕೂ ಪಾತ್ರವಾಗುವಷ್ಟು ಅಮೂಲ್ಯವಾಗಿದ್ದವು. ಹೂವುಗಳ ಕಳ್ಳತನ ಅಲ್ಲಿಗೇ ನಿಂತಿಲ್ಲ... ಈಗಲೂ ನಡೆಯುತ್ತಿದೆ.

ಇಂದು ನಮ್ಮ ಅಪಾರ್ಟ್‌ಮೆಂಟ್‌ನ ವಾಟ್ಸ್‌ಆಪ್ ಗುಂಪಿನಲ್ಲಿ ಉದ್ಯಾನವನದಿಂದ ಪೂಜೆಗೆ ಹೂಗಳನ್ನು ಕದ್ದಿದ್ದಾರೆ ಎಂಬ ಆರೋಪಗಳನ್ನು ಕೆಲವರು ಮಾಡಿದ್ದಾರೆ. ಇನ್ನೂ ಕೆಲವರು ಮನಿ ಪ್ಲಾಂಟ್ ಬಳ್ಳಿಯನ್ನು ಕತ್ತರಿಸಿದ್ದಾರೆ ಎಂದು ದೂರುತ್ತಿದ್ದಾರೆ. ಇಂಥವನ್ನೆಲ್ಲಾ ನೋಡಿದಾಗ ಹೂವುಗಳಿಗೆ, ಬಳ್ಳಿಗಳಿಗೆ ಇತಿಹಾಸದಲ್ಲಿದ್ದ ಮೌಲ್ಯ ಈಗಲೂ ಇದೆ ಎಂದೆನಿಸಿ ನಾನು ಮುಗುಳ್ನಕ್ಕೆ.

ನಾನು 1980ರ ದಶಕದಲ್ಲಿ (ಆಗ ಕೊಚಿನ್ ಎಂದೇ ಕರೆಯಲಾಗುತ್ತಿತ್ತು) ಕೊಚಿ ಫ್ಲಾವರ್ ಶೋ ನಲ್ಲಿ ಪ್ರತಿವರ್ಷ ಕಾಣಿಸಿಕೊಳ್ಳುತ್ತಿದ್ದ ಹೂಗಳ ಸಮೃದ್ಧಿಯಲ್ಲಿ ಬೆಳೆದವಳು. ಆ ಹೂ ಪ್ರದರ್ಶನಕ್ಕೂ ನನಗೂ ಬಹುತೇಕ ಒಂದೇ ವಯಸ್ಸು. ಏಳು ವರ್ಷದ ಮಗು ತನ್ನ ಮುಖದಷ್ಟೇ ದೊಡ್ಡದಾಗಿ ಅರಳಿದ್ದ ಕುಂಡಗಳಲ್ಲಿನ

# ಸಣ್ಣ ಹೂವು ಕೂಡ ನಮ್ಮ ಮನಸ್ಸನ್ನು ಪ್ರಫುಲ್ಲಗೊಳಿಸಬಲ್ಲದು!



ಡಾಹ್ಲಿಯಾ ಹೂಗಳ ಸಾಲುಗಳ ಮಧ್ಯೆ ತಿರುಗಾಡುತ್ತಿದ್ದಾಗ, ಆ ಪ್ರದರ್ಶನವು ಅವಳ ಮನದಲ್ಲಿ ಹೂಗಳ ಮೇಲಿನ ಜೀವಮಾನವಿಡೀ ಮುಂದುವರಿಯುವ, ಪೂಜೆಯಂತೆಯೇ ತೋರುವ ಪ್ರೀತಿಯನ್ನು ನನ್ನಲ್ಲಿ ಹುಟ್ಟಿಸಿತು.

ಹೂಗಳ ಚಿತ್ರಗಳಿರುವ ತಟ್ಟೆಗಳಲ್ಲಿ ಊಟ ಸಿಗದಿದ್ದರೆ, ಅವಳು ಹಸಿದೇ ಉಳಿಯಲು ಸಿದ್ಧಳಾಗಿದ್ದಳು. ಅದು ಅವಳಲ್ಲಿ ಸಸ್ಯಗಳು ಮತ್ತು ಹೂಗಳ ವೈಜ್ಞಾನಿಕ ಹೆಸರುಗಳನ್ನು ಕಣ್ತುಂಬಿಕೊಳ್ಳುವ ಆಸೆಯನ್ನು ಹುಟ್ಟಿಸಿತು. ಹೂಗಳ ಬಗ್ಗೆ ಸಮಾನವಾಗಿ ಹುಚ್ಚು ಹೊಂದಿದ್ದ ತಾಯಿಯೊಂದಿಗೆ, ಅವರು ಲಾಂಟಾನಾ ಗಿಡಗಳನ್ನು ಮರದ ತುಂಡುಗಳ ಮೇಲೆ ಹತ್ತುವಂತೆ ತರಬೇತಿ ನೀಡಿದರು, ಅಪರೂಪದ ಬಣ್ಣಗಳ ಬೌಗನ್ವಿಲಾ ಗಿಡಗಳನ್ನು ಸಂಯೋಜಿಸಿದರು, ಮತ್ತು ಮನೆಯೆಡೆ ಉದ್ದವಾದ ಕಲಶಗಳಲ್ಲಿ ಬರ್ಡ್ಸ್ ಆಫ್ ಪ್ಯಾರಡೈಸ್ ಹೂಗಳನ್ನು ಅಲಂಕರಿಸಿದರು.

ಹೂವಿನ ಪ್ರದರ್ಶನಗಳಿಗೆ ಜಗತ್ತಿನಲ್ಲಿ ದೀರ್ಘ ಇತಿಹಾಸವಿದೆ. 18ನೇ ಶತಮಾನದ ಸಮುದ್ರಯಾನಗಳು ಮತ್ತು ಅನ್ವೇಷಣೆಗಳು ಖಂಡಗಳನ್ನು ಪರಸ್ಪರ ಪರಿಚಯಿಸಿದವು; ಅವುಗಳ ಸಸ್ಯಜಾಲ ಮತ್ತು ಪ್ರಾಣಿಜಾಲಗಳು ಒಂದರಿಂದ ಮತ್ತೊಂದಕ್ಕೆ ಹರಡಿದಂತೆ, ತೋಟಗಾರಿಕೆ ಕ್ಷೇತ್ರದಲ್ಲಿ ಮಹತ್ತರ ಬೆಳವಣಿಗೆಗಳು ಕಂಡುಬಂದವು.

ವಸಾಹತುಶಾಹಿಯ ಪ್ರೇರಣೆಯಿಂದ ಭಾರತದಲ್ಲಿಯೂ ಅನೇಕ ಸಸ್ಯಉದ್ಯಾನವನಗಳು ಮತ್ತು ತೋಟಗಾರಿಕಾ ಸಂಘಗಳು ಸ್ಥಾಪನೆಯಾದವು. ದಕ್ಷಿಣ ಭಾರತದ ಬಹುತೇಕ ಜನರಿಗೆ ಊಟಿಯಲ್ಲಿನ ಸಸ್ಯ ಉದ್ಯಾನಗಳಲ್ಲಿ ಶತಮಾನಕ್ಕಿಂತಲೂ ಹೆಚ್ಚು ಕಾಲದಿಂದ ನಡೆಯುತ್ತಿರುವ ಹೂ ಪ್ರದರ್ಶನ ಪರಿಚಿತವಾಗಿದೆ.

ನಾನು ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾಗ, ಗಣರಾಜ್ಯೋತ್ಸವದ ಸಮಯದಲ್ಲಿ ನಡೆಯುತ್ತಿದ್ದ ಲಾಲ್‌ಬಾಗ್ ಹೂ ಪ್ರದರ್ಶನಕ್ಕೆ ನನ್ನ ಮಗಳನ್ನು ಕರೆದೊಯ್ಯುತ್ತಿದ್ದೆ. ಅಲ್ಲಿ ಕೆಂಪು ಗುಲಾಬಿಗಳ ಮಹತ್ತರ ಹೃದಯಾಕೃತಿಗಳ ಮುಂದೆ ನಿಂತು ಜನರು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ಇಂದು ಗಾರ್ಡನ್ ಸಿಟಿ ಎಂದೇ ಹೆಸರಾದ ಬೆಂಗಳೂರಿನಲ್ಲಿ ತಾಬೆಬುಯಾ ಮರಗಳು ಒಂದೇ ಸಮಯದಲ್ಲಿ ಗುಲಾಬಿ ಬಣ್ಣದಲ್ಲಿ ಅರಳಿ, ಜಪಾನ್‌ನ ಸಾಕುರಾ ಹೂಗಳಂತೆ ಅದ್ಭುತ ದೃಶ್ಯವನ್ನು ಸೃಷ್ಟಿಸುವ ಪಿಂಕ್ ಪೊಯಿ ಎನ್ನುವ ಹೊಸ ಸಂಭ್ರಮವೂ ಕಾಣಿಸುತ್ತಿದೆ.

ಬೆಂಗಳೂರಿಗೆ ಪಿಂಕ್ ಪೊಯಿ ಇದ್ದರೆ, ಲಡಾಖ್‌ನಲ್ಲಿ ಅಪ್ರಿಕಾಟ್ ಹೂಗಳೂ ಅದೇ ರೀತಿ ಗುಲಾಬಿ ಬಣ್ಣದಲ್ಲಿ ಅರಳಿ ಕಣ್ಮನ ಸೆಳೆಯುತ್ತವೆ. ಮತ್ತಷ್ಟು, ಪ್ರಕಾಶಮಾನವಾದ ಬುಗನ್ವಿಲಿಯಾ (ಅವು ನಿಜವಾದ ಹೂಗಳು ಅಲ್ಲ, ಬಣ್ಣದ ಬ್ರಾಕ್ಟ್‌ಗಳು) ಇರದೇ ಇದ್ದಿದ್ದರೆ, ನಮ್ಮ ಹೆರಿ ಪ್ರಯಾಣಗಳು ಇನ್ನಷ್ಟು ನೀರಸವಾಗುತ್ತಿದ್ದವೇನೋ!

ನಮ್ಮ ಕಲೆ ಮತ್ತು ಕೈಗಾರಿಕೆಗಳು ಹೂಗಳ ಮೇಲೆ ಆಧಾರಿಸಿಕೊಂಡೇ ಅರಳುತ್ತವೆ. ಕಾಂಚೀಪುರಂ ಸೀರೆಯಲ್ಲಿನ ಕಮಲ (ತಾವರೆ) ಬುಟ್ಟಾ ಅಥವಾ ತುತ್ತಿರಿಪೂ (ಇಂಡಿಯನ್ ಮ) ಅಲಂಕಾರಗಳು ಹೊಳೆಯುತ್ತವೆ. ಮೊಘಲ್ ಶೈಲಿಯ ವಾಸ್ತುಶಿಲ್ಪದಲ್ಲಿಯೂ ಹೂಗಳಿಗೆ ವಿಶೇಷ ಸ್ಥಾನವಿದೆ. ತಾಜ್‌ಮಹಲ್ ಇದಕ್ಕೆ ಅದ್ಭುತ ಸಾಕ್ಷಿ. ಅದು ಅಮೂಲ್ಯ ರತ್ನಗಳಿಂದ ಕೆತ್ತಿದ ಹೂವಿನ ಅಲಂಕಾರಗಳು ಬಲು ಸೊಗಸಾಗಿ ಕಾಣಿಸುತ್ತವೆ. ಹೂಗಳು ಇರಲಿಲ್ಲವಾದರೆ, ನಮ್ಮ ಸಾಹಿತ್ಯದ ಅರ್ಧ ಭಾಗವೇ ಒಣಗಿ ಹೋಗುತ್ತಿತ್ತು. ಆಂಗ್ಲಕವಿ ವರ್ಡ್ಸ್ ವರ್ತ್‌ಅವರಿಗೆ ಕನಸು ಕಾಣಲು ಡ್ಯಾಫೋಡಿಲ್‌ಗಳು ಸಿಗುತ್ತಿರಲಿಲ್ಲ; ಕುಮಾರನ್ ಅಸನ್ ಅವರು ಬಿದ್ದ ಹೂವಿನ ಬಗ್ಗೆ ತತ್ತ್ವಚಿಂತನೆ ಮಾಡುತ್ತಿರಲಿಲ್ಲ (ವೀಣ ಪೂವು ಮಲಯಾಳಂ ಸಾಹಿತ್ಯದ ಒಂದು ಕ್ಲಾಸಿಕ್). ಟಾಗೋರ್ ಅವರು ದೇವರನ್ನು ತಮ್ಮನ್ನು ಚಿಕ್ಕ ಹೂವಿನಂತೆ ಕಿತ್ತುಕೊಳ್ಳಲು ಬೇಡಿಕೊಳ್ಳಲಾರರು; ಅಥವಾ ಎಮಿಲಿ ಡಿಕೆನ್‌ಸನ್ ಸಣ್ಣ ಹೂವನ್ನೂ ನಾವು ಏಕೆ ನಿರ್ಲಕ್ಷಿಸಬಾರದು ಎಂದು ಬರೆಯುತ್ತಿರಲಿಲ್ಲ.

ಪ್ರೇಮ-ಅದರಲ್ಲೂ ರೋಮ್ಯಾಂಟಿಕ್ ಪ್ರೇಮ-ಗುಲಾಬಿ ಹೂಗಳಿಂದಲೇ ಪ್ರತೀಕವಾಗುತ್ತದೆ. ಜಾನ್ ಬಾಯ್ಲಿ ಓ ರೆಲ್ಲಿ ಅವರ ದೃಷ್ಟಿಯಲ್ಲಿ, ಕ್ರೀಮ-ಬಿಳಿ ಬಣ್ಣದ ಗುಲಾಬಿ ಮೊಗ್ಗು, ಅದರ ದಳಗಳ ತುದಿಯಲ್ಲಿ ಹಚಿಚ್ಚಿಕೊಂಡಿರುವ ಮೃದುವಾದ ಕೆಂಪು ಛಾಯೆಯೊಂದಿಗೆ, ಅತ್ಯಂತ ಶುದ್ಧ ಮತ್ತು ಸಿಹಿಯಾದ ಪ್ರೇಮದ ಸಂಕೇತವಾಗಿದೆ.

ಮಹಮ್ಮದ್ ರಫಿ ಅವರ ಹಾಡುಗಳಲ್ಲಿ ನಮ್ಮ ನಾಯಕರು ಇನ್ನಷ್ಟು ರೋಮ್ಯಾಂಟಿಕ್ ಆಗುತ್ತಾರೆ-ಪ್ರಿಯತಮೆಗೆ ಬರೆದ ಪತ್ರ ಬೆಳಗ್ಗೆ ಹೂವಾಗಿ, ರಾತ್ರಿ ನಕ್ಷತ್ರವಾಗಿ ಪರಿವರ್ತಿತವಾಗುತ್ತದೆ ಎಂಬ ಕಲ್ಪನೆ ಅದರಲ್ಲಿ ಜೀವಂತವಾಗುತ್ತದೆ (ಲಿಖೇನ್ ಜೋ ಖತ್ ತುಜೆ). ಮಹಾಭಾರತದ ಭೀಮ ದ್ರೌಪದಿಗೆ ತನ್ನ ಭಕ್ತಿಯನ್ನು ತೋರಿಸಲು ಕಲ್ಯಾಣಸೌಗಂಕಾ ಎಂಬ ಅಮೂಲ್ಯ ಹೂವನ್ನು ತಂದುಕೊಟ್ಟನು-ಅದು ಶಾಶ್ವತ ಪ್ರೀತಿಯ ಸಂಕೇತವಾಗಿದೆ. ಮದುವೆಗಳಲ್ಲಿ ವಧುಗಳು ಹೂಗುಚ್ಛ ಹಿಡಿದುಕೊಂಡಿರುತ್ತಾರೆ; ಜಯಮಾಲೆ ವಿನಿಮಯವಾಗುತ್ತದೆ; ಹೊಸ ದಂಪತಿಗಳ ಮೇಲೆ ಹೂಗಳನ್ನು ಸುರಿಸಲಾಗುತ್ತದೆ. ಜೀವಿತದ ಅಂತಿಮ ಯಾತ್ರೆಯಲ್ಲಿಯೂ ಹೂಗಳು ನಮ್ಮೊಂದಿಗೇ ಇರುತ್ತವೆ. ಜೀವನದ ಪ್ರತಿಯೊಂದು ಹಂತದಲ್ಲೂ ಹೂಗಳು ನಮ್ಮ ಜತೆ ನಡೆಯುತ್ತವೆ.

ಹೂಗಳಿಲ್ಲದ ಆಚರಣೆಗಳನ್ನು ನಾವು ಕಲ್ಪಿಸಿಕೊಳ್ಳಬಹುದೇ? ಚೈತ್ರ ಮಾಸದ ಮೊದಲ ದಿನ, ಉತ್ತರಾಖಂಡದಲ್ಲಿ ಫೂಲ್ ದೇಯಿ, ಅಥವಾ ಫೂಲ್ ಸಂಕ್ರಾಂತಿ ಎಂದು ಕರೆಯುವ ಹಬ್ಬದಲ್ಲಿ ಚಿಕ್ಕ ಹುಡುಗಿಯರು ಪ್ರತಿಯೊಂದು ಮನೆಬಾಗಿಲಿಗೂ ಹೂಗಳನ್ನು ಇಟ್ಟು ಫೂಲ್ ದೇಯಿ, ಛಮ್ಮಾ ದೇಯಿ ಎಂದು ಹಾಡುತ್ತಾರೆ. ಅದರ ನಂತರ ನಾನು ಚರ್ಚಿನಲ್ಲಿ ನಡೆದ ಪ್ರಾರ್ಥನೆಯಲ್ಲಿ ಭಾಗವಹಿಸಿ, ಹೊಸನ್ನಾ ಎಂದು ಘೋಷಿಸುತ್ತಾ ಹೂಗಳನ್ನು ಅರ್ಪಿಸುವ ಸಂಪ್ರದಾಯವನ್ನು ಕಂಡೆ.

ಪಾಮ್ ಸಂಡೇ ಒಂದು ವಸಂತೋತ್ಸವದ ಸೊಗಸನ್ನು ಹೊತ್ತುಕೊಂಡಿರುವ ಮಂತ್ರಮುಗ್ಧ ಅನುಭವ ಪಡೆದು, ತಾಳೆ ಎಲೆಗಳನ್ನು ಹಿಡಿದು, ಅದರ ತುದಿಯಲ್ಲಿ ಕ್ರಾಸ್ ರೂಪಿಸಿ, ಅದನ್ನು ಗೌರವದಿಂದ ಮನೆಗೆ ತರುವುದು ವಿಶೇಷ. ಇದು ನನಗೆ ಬೃಂದಾವನದ ಬಂಕೆ ಬಿಹಾರಿ ದೇವಾಲಯದಲ್ಲಿ ನಡೆಯುವ ಫೂಲೋನವಾಲಿ ಹೋಳಿಯನ್ನು ನೆನಪಿಸುತ್ತದೆ.

ಹೂಗಳಿಂದಲೇ ಆಡುವ ಹೋಳಿ. ಬಸಂತ ಪಂಚಮಿಯಂದು, ದೆಹಲಿಯ ನಿಜಾಮುದ್ದೀನ್ ಪ್ರದೇಶದಲ್ಲಿರುವ ಹಜರತ್ ನಿಜಾಮುದ್ದಿನ್ ಔಲಿಯ ದರ್ಗಾದಲ್ಲಿ ಹಳದಿ ಸಾಸಿವೆ ಮತ್ತು ಮಾರಿ ಗೋಲ್ಡ್ ಹೂಗಳಿಂದ ಆಚರಣೆ ನಡೆಯುತ್ತದೆ. ಓಣಂ ಹಬ್ಬ ಪೂಕಳಂ ಇಲ್ಲದೆ ಅಪೂರ್ಣ; ವಿಷು ಹಬ್ಬದ ವಿಷುಕ್ಕಣಿಯಲ್ಲಿ ಕೊನ್ನ (ಲ್ಯಾಬರ್ನಮ) ಹೂಗಳ ವೈಭವ ಅತ್ಯಗತ್ಯ.

ಹೀಗೆ ಹೂಗಳು ನಮ್ಮ ಸಂಸ್ಕೃತಿ, ಆಚರಣೆ, ಮತ್ತು ಬದುಕಿನ ಪ್ರತಿಯೊಂದು ಹಂತವನ್ನು ಸುಗಂಧ ಮಯಗೊಳಿಸುತ್ತವೆ. ಜೀವನ ನಿರುತ್ಸಾಹಕರವಾಗಿದಾಗ, ಯುದ್ಧದಲ್ಲಿರುವ ದೇಶಗಳು ನಿರಾಶೆಯ ಗಾಳಿ ಹರಡಿಸಿದಾಗ, ಹೂಗಳ ಸರಳ ದೃಶ್ಯವೇ ನಮ್ಮೊಳಗೆ ಹೊಸ ಆಸೆಯನ್ನು ತುಂಬುತ್ತದೆ. ದಶಕದ ಹಿಂದೆ ಹಾರ್ವರ್ಡ್ ಮೆಡಿಕಲ್ ಸ್ಕೂಲ್ ಹಾಗು ಮ್ಯಾಸಚೂಸೆಟ್ಸ್‌ನಲ್ಲಿ ಎಕಾಲಜಿ ಆಫ್ ಫ್ಲವರ್ಸ್ ಬಗ್ಗೆ ನಡೆಸಲಾದ ಒಂದು ಅಧ್ಯಯನವು, ಬೆಳಗಿನ ವೇಳೆಯಲ್ಲಿ ಸಣ್ಣ ಹೂವಿನ ಅಲಂಕಾರಗಳನ್ನು ನೋಡುವುದೇ ನಮ್ಮ ಮನೋಭಾವವನ್ನು ಗಮನಾರ್ಹವಾಗಿ ಸುಧಾರಿಸುತ್ತದೆ ಎಂಬುದನ್ನು ದೃಢಪಡಿಸಿದೆ. ಇನ್ನು ಬೈಬಲ್‌ನಲ್ಲಿಯೂ ಮಾನವನು ದೇವರಿಗೆ ಅಮೂಲ್ಯನೆಂದು ಹೇಳಿ, ಹೊಲದ ಲಿಲಿ ಹೂಗಳನ್ನು ನೋಡಿ ಎಂಬುದು ಸಾಕ್ಷಿಯಾಗಿ ನೀಡಲಾಗಿದೆ.

ಸೊಲೊಮೋನ್ ತನ್ನ ಎಲ್ಲ ವೈಭವದಲ್ಲಿದ್ದರೂ ಅವುಗಳಷ್ಟು ಸುಂದರನಾಗಿರಲಿಲ್ಲ; ಹೀಗಿದ್ದರೆ ದೇವರು ತನ್ನ ಮಕ್ಕಳನ್ನು ಇನ್ನಷ್ಟು ಕಾಳಜಿಯಿಂದ ನೋಡಿಕೊಳ್ಳುವನು ಎಂಬ ತಾತ್ಪರ್ಯ ಅಡಗಿದೆ. ಹೊಲದಲ್ಲಿರುವ ಪ್ರತಿಯೊಂದು ಚಿಕ್ಕ ಹೂವೂ ಈ ಜಗತ್ತಿನಲ್ಲಿ ಯಾವುದೂ ಅಲ್ಪವಲ್ಲ ಎಂಬ ಸತ್ಯವನ್ನು ಸಾರುತ್ತದೆ.

ಇಂದು ಪಾಪ್ ಸಂಸ್ಕೃತಿ ನೀವು ನೆಡಲ್ಪಟ್ಟಿರುವ ಅರಳಿ ಎಂದು ಹೇಳುತ್ತಾ ಹೂಗಳ ಉಪಮೆಯನ್ನು ಬಳಸಿಕೊಂಡಿದ್ದರೂ, ಎಲ್ಲ ಮರಗಳೂ ಒಂದೇ ಸಮಯದಲ್ಲಿ ಅರಳುವುದಿಲ್ಲ ಎಂಬ ನಿಜವನ್ನೂ ಹೇಳುತ್ತದೆ. ಹೂಗಳು ನಮ್ಮನ್ನು ಅದ್ಭುತ ಸೌಂದರ್ಯ ಮತ್ತು ಸತ್ಯದ ಬೆಳಕಿನಲ್ಲಿ ನೆನೆಸುತ್ತವೆ. ಇನ್ನು ನನ್ನ ವಿಷಯಕ್ಕೆ ಬಂದರೆ, ಈ ಒಪ್ಪಂದ ಬಹಳ ಹಿಂದೆಯೇ ನಿಶ್ಚಯವಾಗಿತ್ತು. ನನ್ನ ಅಜ್ಜನು ನನ್ನ ಹೆಸರೇ ಹೆಬ್ರೂ ಭಾಷೆಯಲ್ಲಿ ಲಿಲಿ ಎಂದರ್ಥ ಎಂದು ಹೇಳಿದ ದಿನದಿಂದ. ಶೋಶನ್ನಾ. ನಾನು ಹೂಗಳನ್ನು ಪ್ರೀತಿಸುವವಳು; ಸಂದೇಹ ಬಂದಾಗ ಹೂಗಳನ್ನು ಖರೀದಿಸುವವಳು.

– **ಸುಸಾನ್** ಥಾಮಸ್

# ಬಸವಣ್ಣ ಸಮಾನತೆ ಸಾರಿದ ಮಹಾನ್ ನಾಯಕ

## ಬಸವೇಶ್ವರರ ತತ್ವಾದರ್ಶಗಳು ಇಂದಿಗೂ ಸಮಾಜಕ್ಕೆ ದಾರಿದೀಪ: ಶಾಸಕ ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಸವ ಜಯಂತಿಯನ್ನು ಭಕ್ತಿಭಾವದಿಂದ ಶಾಸಕ ಹೆಚ್.ಕೆ.ಸುರೇಶ್ ಸೇರಿದಂತೆ ಸಮುದಾಯದ ವತಿಯಿಂದ ಅದ್ದೂರಿಯಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿ ಮಾತನಾಡಿದ ಶಾಸಕ ಹೆಚ್.ಕೆ.ಸುರೇಶ್ ಅವರು, ಬಸವಣ್ಣನವರ ತತ್ವಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ. ಕಾಯಕವೇ ಕೈಲಾಸ ಎಂಬ ಮಹತ್ವದ ಸಂದೇಶವನ್ನು ನೀಡಿದ ಬಸವಣ್ಣ ಅವರು ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಸಮಾನತೆ ಸಾರಿದ ಮಹಾನ್ ನಾಯಕರು ಎಂದರು.



ಅನುಭವ ಮಂಟಪದ ಮೂಲಕ ಬಸವಣ್ಣನವರು ಸಮಾಜದಲ್ಲಿ ಪ್ರಜಾಸತ್ತಾತ್ಮಕ ಚಿಂತನೆಗಳನ್ನು ಬಿತ್ತಿದವರು. ಇಂದಿನ ಸಂಸತ್ತಿನ ಮಾದರಿಯಲ್ಲೇ ಅನುಭವ ಮಂಟಪ ಕಾರ್ಯ ನಿರ್ವಹಿಸಿದ್ದು, ಎಲ್ಲಾ ವರ್ಗದ ಜನರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ವೇದಿಕೆಯಾಗಿತ್ತು ಎಂದು ತಿಳಿಸಿದರಲ್ಲದೆ, ಹಿಂದಿನ ವರ್ಷ ಬಸವಣ್ಣನವರ ಅನುಭವ ಮಂಟಪದ ಸಂದೇಶವನ್ನು ಸಂಸತ್ತಿನ ಮಟ್ಟದಲ್ಲೂ ಪ್ರಸ್ತಾಪಿಸಲಾಗಿದ್ದು, ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸಹ ಬೆಂಬಲ ಸೂಚಿಸಿದ್ದನ್ನು ಅವರು ಸ್ಮರಿಸಿದರು.

ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಆಡುಗೂರು ಬಸವರಾಜ್ ಅವರು ಮಾತನಾಡಿ, ಬಸವಣ್ಣನವರು ಸಮಾಜದಲ್ಲಿ ಸಮಾನತೆ, ಶ್ರಮಕ್ಕೆ ಗೌರವ ಹಾಗೂ ಮಾನವೀಯ ಮೌಲ್ಯಗಳನ್ನು ಬಿತ್ತಿದ ಮಹಾನ್ ಚಿಂತಕರು "ಕಾಯಕವೇ ಕೈಲಾಸ" ಎಂಬ ಅವರ ಮಹತ್ವದ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಬಸವ ಜಯಂತಿ ಆಚರಣೆ ಸಾರ್ಥಕವಾಗುತ್ತದೆ. ಅನುಭವ ಮಂಟಪದ ಮೂಲಕ ಬಸವಣ್ಣನವರು ಎಲ್ಲ ವರ್ಗದ ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಪ್ರತಿಪಾದಿಸಿದ ಮಹಾನಾಯಕರು ಎಂದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ವೀರಶೈವ ಮುಖಂಡರಾದ ಗ್ರಾನೈಟ್ ರಾಜಶೇಖರ್, ಬಲ್ಲೇನಹಳ್ಳಿ ರವಿಕುಮಾರ್, ವಿಕ್ರಂ ಕೌರಿ, ಅದ್ದೂರಿ ಕುಮಾರ್, ಗೆಂಡೇಹಳ್ಳಿ ಚೇತನ್, ವಿರುಪಾಕ್ಷ, ಮದನ್ ಬಳ್ಳೂರು, ಯೋಗೇಶ್, ಉಮೇಶ್, ವಿಂಪು ಸಂತೋಷ್, ಲಕ್ಷ್ಮೀ, ನಾಗೇಶ್, ಪುರಸಭೆ ಸದಸ್ಯರಾದ ಜಮಾಲ್, ತೀರ್ಥಕುಮಾರಿ ಇನ್ನಿತರರಿದ್ದರು.

# ಬಸವಣ್ಣನ ಆದರ್ಶಗಳು ಆದರಣೀಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಶತಮಾನಗಳು ಕಳೆದರೂ ಬಸವಣ್ಣನವರ ವಚನ ತತ್ವ, ಆದರ್ಶಗಳು ಇಂದಿಗೂ ಆದರಣೀಯವಾಗಿದೆ ಎಂದು ಶಾಸಕ ಎಚ್.ಡಿ.ರೇವಣ್ಣ ಅವರು ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಭಕ್ತಿ ಭಂಡಾರಿ ಶ್ರೀ ಬಸವೇಶ್ವರರ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಸುದಾರಣೆಗೆ ಶ್ರಮಿಸಿದ ಸಮಾನತೆಯ ಹರಿಕಾರ ಶ್ರೀ ಬಸವಣ್ಣನವರು ಎಂದೆಂದಿಗೂ ಅಮರ ಜ್ಯೋತಿ. ಇದಕ್ಕೆ ಕಾರಣ 12 ನೇ ಶತಮಾನದಲ್ಲಿ ಸರಳ ಸಾಹಿತ್ಯದ ಮೂಲಕ ಜನರಿಗೆ ಅರಿವು ಮೂಡಿಸಿದ ಶ್ರಮದ ಪ್ರತಿಫಲವಾಗಿದೆ. 800 ವರ್ಷ ಕಳೆದರೂ ಅವರನ್ನು ಸ್ಮರಿಸಲೇಬೇಕಾಗಿರುವುದು ಅವರ ಸಮಾಜಿಕ ಚಿಂತನೆ ಮತ್ತು ಪ್ರಯತ್ನದಿಂದಲೇ. ಸರಕಾರ ಮಹನೀಯರ ಆಚರಣೆಗೆ ಅರ್ಥ ಬರುವಂತೆ ಶಿಕ್ಷಣ, ಆರೋಗ್ಯ ಮತ್ತು ಸಮಾನತೆಯನ್ನು ತರಲು ಉತ್ತಮ ಕಾರ್ಯಕ್ರಮ ರೂಪಿಸಬೇಕು. ಆಗ ಮಾತ್ರ ಬಸವಣ್ಣನವರ ಕನಸು ನನಸಾಗುತ್ತದೆ ಎಂದರು.



ಉಪನ್ಯಾಸಕ ಚಂದ್ರಶೇಖರ್ ಮಡಬೂರು ಅವರು ಮಾತನಾಡಿ, ಸಾಮಾಜಿಕ ಕ್ರಾಂತಿಯ ಮೂಲಕ ಸಮಾಜದಲ್ಲಿ ಸಮಾನತೆಯ ಪರಿಕಲ್ಪನೆ ಮೂಡಿಸುವ ಪ್ರಯತ್ನ ನಡೆಸಿದ ಬಸವೇಶ್ವರರು ಶರಣ ಪರಂಪರೆಯ ಅಗ್ರಮಾನ್ಯರು. ಲಿಂಗಬೇದ, ಮೇಲು, ಕೀಳು, ಅಶ್ಪುಷ್ಯತೆ ತೊಡದು ಹಾಕುವ ಅವರ ಪ್ರಯತ್ನ ನಡೆಸಿದರು. ಇದರಿಂದಲೇ ವಿಶ್ವಗುರು, ಜಗತ್ತಿನ ಜ್ಯೋತಿ ಎಂದು ಹೆಸರಾದರು. ಇವರ ತತ್ವಗಳನ್ನು ಕಿಂಚಿತ್ ಅರ್ಥ ಮಾಡಿಕೊಂಡು ಪಾಲಿಸಿದರೆ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಅವರು ಹೇಳಿದರು.

ತಹಸೀಲ್ದಾರ್ ವೈ.ಎಂ.ರೇಣುಕುಮಾರ್, ಪುರಸಭಾ ಮುಖ್ಯಾಧಿಕಾರಿ ಶಿವಶಂಕರ್, ಎಚ್.ಎಸ್.ಪುಟ್ಟಸ್ವಾಮಪ್ಪ, ಕುಮಾರಸ್ವಾಮಿ, ಅಣ್ಣಾಜಪ್ಪ, ಶ್ರೀ ಶಿವಕುಮಾರಸ್ವಾಮಿ, ಸಹಕಾರ ಸಂಘದ ಅಧ್ಯಕ್ಷ ಸುರೇಶ್ ಹಾಗೂ ಎಚ್.ಟಿ.ಲಕ್ಷ್ಮಣ್ ಉಪಸ್ಥಿತರಿದ್ದರು.

# ನೆಮ್ಮದಿ ನೀಡುವ ಮಠ, ಮಂದಿರಗಳು

• ಪ್ರಜೋದಯ ವರದಿ

**ಅರಸೀಕೆರೆ:** ದೇವಾಲಯ, ಮಠ, ಮಂದಿರಗಳು ಜಂಜಾಟ ಜೀವನ ಸಾಗಿಸುತ್ತ ದಿನದೂಡುತ್ತಿರುವ ಮನುಷ್ಯನಿಗೆ ನೆಮ್ಮದಿ ಹಾಗೂ ಮನಃಶಾಂತಿ ನೀಡುವ ಆಧ್ಯಾತ್ಮಿಕ ಕೇಂದ್ರಗಳು ಎಂದು ಹಾಸನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಶಂಭುನಾಥ ಸ್ವಾಮೀಜಿ ಹೇಳಿದರು.



ತಾಲ್ಲೂಕಿನ ಗಂಡಸಿ ಹೋಬಳಿ ರಾಂಜೀಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಕಾಲಭೈರವೇಶ್ವರ ಸ್ವಾಮಿ ದೇವಾಲಯದ ಲೋಕಾರ್ಪಣೆ ಕಾರ್ಯಕ್ರಮದ ಧಾರ್ಮಿಕ ಸಮಾರಂಭದಲ್ಲಿ ಪಾಲ್ಗೊಂಡು ಶ್ರೀಗಳು ಆಶೀರ್ವಚನ ನೀಡಿದರು.

ಗುರು ಹಿರಿಯರ ಮಾರ್ಗದರ್ಶನ ಮಠ ಮಂದಿರಗಳಂತ ಆಧ್ಯಾತ್ಮಿಕ ತಾಣಗಳು ನಮ್ಮ ಸುತ್ತಮುತ್ತ ಇದ್ದರೆ ಪ್ರತಿಯೊಬ್ಬ ಮನುಷ್ಯನ ಬದುಕು ಸಾರ್ಥಕತೆಯಿಂದ ಕೂಡಿರುತ್ತದೆ ಅಂತಹ ಸಾರ್ಥಕತೆಯ ಕಾರ್ಯವನ್ನು ಕಾಲಭೈರವೇಶ್ವರ ಸ್ವಾಮಿಯ ದೇವಾಲಯ ನಿರ್ಮಾಣ ಮಾಡುವುದರ ಮೂಲಕ ಗ್ರಾಮಸ್ಥರು ಹಾಗೂ ಭಕ್ತರು ಧನ್ಯರಾಗಿದ್ದು ಈ ರೀತಿಯ ಧಾರ್ಮಿಕ ಭಾವನೆಯ ಮನಸ್ಥಿತಿ ಇತರರಿಗೆ ಆದರ್ಶವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವಾಲಯದಲ್ಲಿ ವಿರಾಜಮಾನನಾಗಿ ಪ್ರತಿಷ್ಠಾಪನೆಗೊಂಡಿರುವ ಕಾಲಭೈರವೇಶ್ವರ ಸ್ವಾಮಿಯು ತನ್ನ ಭಕ್ತರನ್ನು ಹಾಗೂ ಗ್ರಾಮಸ್ಥರನ್ನು ಹಗಲು ಇರುಳು ಕಾಯಲಿ ನಿಮ್ಮೆಲ್ಲರ ಮನದ ಇಷ್ಟಾರ್ಥಗಳನ್ನ ಈಡೇರಿಸಲಿ ಎಂದು ಗ್ರಾಮಸ್ಥರಿಗೆ ಆಶೀರ್ವದಿಸಿದರು.

ರಾಮಚಂದ್ರ, ಗ್ರಾಮ ಪಂಚಾಯತಿ ಮಾಜಿ ಸದಸ್ಯ ಪ್ರಸನ್ನ, ಕೊಪ್ಪಲು ಪುಟ್ಟಸ್ವಾಮಿ, ಹೊಸಳ್ಳಿ ಬಾಲು, ಮುಖಂಡರಾದ ಭೈರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕಾನೂನು ನೆರವು ಅಭಿರಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

**ಹಾಸನ:** ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪತ್ರದ ಅನ್ವಯ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ, ಕಾನೂನು ನೆರವು ಅಭಿರಕ್ಷಕರ ಕಚೇರಿಗೆ ಒಪ್ಪಂದದ ಮೇರೆಗೆ ಕೆಲಸ ನಿರ್ವಹಿಸಲು ಉಪ ಮುಖ್ಯ ಕಾನೂನು ನೆರವು ಅಭಿರಕ್ಷಕರ 2 ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಏ.27ರಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಮೇ 08 ರಂದು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕವಾಗಿದ್ದು ಸಂಜೆ 5 ಗಂಟೆಯ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ.

ಅರ್ಜಿಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಯಲ್ಲಿ ಪಡೆದು, ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ,

# ಮಹಾಪುರುಷರು ಒಂದು ಸಮುದಾಯಕ್ಕೆ ಸೀಮಿತರಾಗಬಾರದು

## ವಿದ್ಯಾವಂತರಾದಂತೆ ಜಾತೀಯತೆಯೂ ಹೆಚ್ಚುತ್ತಿರುವುದು ವಿಷಾದಕರ: ಶಾಸಕ ಎ.ಮಂಜು

• ಪ್ರಜೋದಯ ವರದಿ

**ಅರಕಲಗೂಡು:** ಮಹಾಪುರುಷರು ಯಾವುದೇ ಒಂದು ಸಮುದಾಯಕ್ಕೆ ಸೀಮಿತರಲ್ಲ, ಸಮಾಜದ ಅಭ್ಯುದಯಕ್ಕಾಗಿಕ್ಕೆ ಶ್ರಮಿಸಿದ ಇವರ ಜಯಂತಿಯನ್ನು ಎಲ್ಲ ಸಮುದಾಯವರೂ ಒಟ್ಟಾಗಿ ಆಚರಿಸಿದಾಗ ಮಾತ್ರ ಮುಂದಿನ ಪೀಳಿಗೆಗೆ ದಾರಿದೀಪವಾಗುತ್ತದೆ ಎಂದು ಶಾಸಕ ಎ.ಮಂಜು ತಿಳಿಸಿದರು.



ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಬಸವೇಶ್ವರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಸವಣ್ಣ, ಬುದ್ದ, ಕುವೆಂಪು, ಅಂಬೇಡ್ಕರ್ ಅವರಂತಹ ಸಮಾಜ ಸುಧಾರಕರನ್ನು ಯಾವುದೇ ಸಮುದಾಯ, ಜಾತಿಗಳಿಗೆ ಸೀಮಿತ ಗೊಳಿಸಬಾರದು, 12 ನೇ ಶತಮಾನದಲ್ಲೆ ಜಾತ್ಯಾತೀತ ಸಮಾಜದ ಕನಸು ಕಂಡ ಬಸವಣ್ಣನವರು ಕ್ರಾಂತಿಯನ್ನೆ ಮಾಡಿದ್ದರು. ವಿದ್ಯಾವಂತರಾದಂತೆ ಜಾತೀಯತೆಯೂ ಹೆಚ್ಚುತ್ತಿರುವುದು ವಿಷಾದಕರ ಸಂಗತಿ, ಬಸವಣ್ಣನವರ ಆದರ್ಶಗಳನ್ನು ಮೈಗೂಡಿಸಿಕೊಂಡು ಉತ್ತಮ ಸಮಾಜ ನಿರ್ಮಿಸಲು ಮುಂದಾಗಬೇಕಿದೆ ಎಂದು ಕರೆ ನೀಡಿದರು.

ತಾಲ್ಲೂಕು ವೀರಶೈವ ಲಿಂಗಾಯಿತ ಸಮಾಜದ ಅಧ್ಯಕ್ಷ ದೊಡ್ಡಬೆಮ್ಮತ್ತಿ ಸುರೇಶ್ ಮಾತನಾಡಿ, ಶೀಘ್ರದಲ್ಲೆ ಬಸವಣ್ಣನವರ ಜಯಂತಿಯನ್ನು ಅದ್ದೂರಿಯಾಗಿ ಹಮ್ಮಿಕೊಳ್ಳುತ್ತಿದ್ದು ಅಂದು ಸಮುದಾಯ ಭವನ ನಿರ್ಮಾಣ ಹಾಗೂ ಬಸವಣ್ಣನವರ ಪುತ್ಥಳಿ ನಿರ್ಮಾಣ ಕಾರ್ಯಗಳಿಗೆ ಚಾಲನೆ ನೀಡಲಾಗುವುದು ಎಂದರು.

ಪ್ರೌಢಶಾಲಾ ಶಿಕ್ಷಕ ಶಿವಶಂಕರ್ ಬಸವಣ್ಣನವರ ಜೀವನ ಮತ್ತು ಸಾಧನೆಗಳ ಕುರಿತು ಪ್ರಧಾನ ಭಾಷಣ ಮಾಡಿದರು. ತಹಶೀಲ್ದಾರ್ ಕೆ.ಸಿ.ಸೌಮ್ಯ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು, ಮುಖಂಡರಾದ ನೈಗೆರೆ ಚನ್ನಕೇಶವೇಗೌಡ, ಎನ್. ರವಿಕುಮಾರ್, ಕೆ.ಸಿ.ಲೋಕೇಶ್, ಮಾಗಲು ಬಸವರಾಜ್, ವೀರಾಜ್, ಡಿಎಸ್‌ಎಸ್ ಮುಖಂಡ ಚಂದ್ರಣ್ಣ, ರಾಷ್ಟ್ರಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ಮಲ್ಲೇಶ್ ಉಪಸ್ಥಿತದ್ದರು.

# ಗೊದ್ದು ಗ್ರಾಮದಲ್ಲಿ ಹಗಲು ಸುಗ್ಗಿ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ವಣಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗೊದ್ದು ಗ್ರಾಮದಲ್ಲಿ ಆದಿಶಕ್ತಿ ದೇವೀರಮ್ಮ ಹಗಲು ಸುಗ್ಗಿ ಉತ್ಸವವು ಭಕ್ತಿಭಾವದಿಂದ ನಡೆಯಿತು. ಬೆಳಿಗ್ಗೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜೆಗಳು ನೆರವೇರಿಸಲ್ಪಟ್ಟು, ಭಕ್ತರು ದೇವರ ದರ್ಶನ ಪಡೆದು ಆಶೀರ್ವಾದ ಪಡೆದರು. ಉತ್ಸವದ ಅಂಗವಾಗಿ ನಾಡಿನ ಒಳಿತಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶಾಸಕ ಸಿಮೆಂಟ್ ಮಂಜು, ಬಿಜೆಪಿ ಮಂಡಲ ಅಧ್ಯಕ್ಷರಾದ ವಳಲಹಳ್ಳಿ ಅಶ್ವತ್ ಸೇರಿ ಹಲವು ಮುಖಂಡರು, ಕಾರ್ಯಕರ್ತರು, ಗ್ರಾಮಸ್ಥರು ಹಾಗು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ಧಾರ್ಮಿಕ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

# ಕತ್ತಲಿನಲ್ಲಿದ್ದ ಜನಾಂಗಕ್ಕೆ ದಾರಿ ತೋರಿದ ಅಂಬೇಡ್ಕರ್

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕತ್ತಲಿನ ಬದುಕಿನಲ್ಲಿದ್ದ ಜನಾಂಗಕ್ಕೆ ಬೆಳಕಿನ ದಾರಿ ತೋರಿದ ಜ್ಞಾನ ಸೂರ್ಯ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಸರ್ಕಾರಿ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಎಂ.ಜೆ.ರತ್ನಾಕರ್ ಅಭಿಪ್ರಾಯಪಟ್ಟರು.



ತಾಲ್ಲೂಕಿನ ಬಾಗೂರು ಹೋಬಳಿ ಕೇಂದ್ರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿ ಬಾಗೂರು ಶಾಖೆ ಇವರ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿ, ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ದೇಶದ ಮನುವಾದಿ ಶ್ರೇಣಿಕೃತ ಅಸಮಾನ ವ್ಯವಸ್ಥೆಯಿಂದಾಗಿ ಸಾವಿರಾರು ವರ್ಷಗಳ ಕಾಲ ಕತ್ತಲೆಯ ಬದುಕಿನಲ್ಲಿ ಪ್ರಾಣಿ- ಪಕ್ಷಿಗಳಿಗಿಂತ ಕೀಳಾಗಿ ಬದುಕುತ್ತಿದ್ದ ಜನಾಂಗವನ್ನು ಮಾನವ ಘನತೆ ಎಂಬ ಬೆಳಕಿನೆಡೆಗೆ ನಡೆಸಿದ ಜ್ಞಾನ ಸೂರ್ಯ. ಶ್ರೇಣಿಕೃತ ವ್ಯವಸ್ಥೆಯನ್ನು ಪ್ರತಿಪಾದಿಸುವ ಮನುಸ್ಮೃತಿಯನ್ನು 1927ರಲ್ಲಿ ಸಾರ್ವಜನಿಕವಾಗಿ ಸುಟ್ಟು ಹಾಕುವ ಮೂಲಕ ಸಮ ಸಮಾಜ ನಿರ್ಮಾಣದ ಮಾನವೀಯತೆಯ ಪ್ರತೀಕದಂತಿ ರುವ ಶ್ರೇಷ್ಠ ಸಂವಿಧಾನವನ್ನ ರಚಿಸಿ ಕೊಟ್ಟಂತಹ ಮಹಾನ್ ಮೇಧಾವಿ ನಿಜವಾದ ದೇಶ ಪ್ರೇಮಿ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗಾಗಿ ಅವರು ಭಾರತಾಂಬೆಯನ್ನು ಜಾತಿ ಯತೆಯ ಸಂಕೋಲಿಯಿಂದ ಬಿಡುಗಡೆಗೊಳಿಸಲು ಹೋರಾಡಿದಂತಹ ನಿಜವಾದ ದೇಶಪ್ರೇಮಿಯಾಗಿದ್ದರು ಎಂದು ಕೊಂಡಾಡಿದರು.

ಒಂದು ದೇಶದ ಪ್ರಗತಿಯನ್ನು ಆ ದೇಶದ ಮಹಿಳೆಯರು ಗಳಿಸಿರುವ ಸ್ವಾತಂತ್ರ್ಯ ಹಾಗೂ ಪ್ರಗತಿ ಹೊಂದಿರುವ ಮಾನದಂಡದ ಆಧಾರದ ಮೇಲೆ ನಿರ್ಧರಿಸಬೇಕು ಎಂದು ಪ್ರತಿಪಾದಿಸುತ್ತಿದ್ದರು ಎಂದ ಅವರು, ಆ ನಿಟ್ಟಿನಲ್ಲಿ ಅವರು ಮಹಿಳೆಯರಗೋಸ್ಕರ ಸಂವಿಧಾನಾತ್ಮಕ ಮಾರ್ಗದಲ್ಲಿ ಹಿಂದೂ ಕೋಡ್‌ಬಿಲ್ ಅಸ್ತ್ರದ ಮೂಲಕ ಹೋರಾಟ ಮಾಡಿದ ಹಾಗೂ ಅವರ ಹಕ್ಕುಗಳನ್ನು ಕಾನೂನಾತ್ಮಕವಾಗಿ ಸಂವಿಧಾನದಲ್ಲಿ ಅಡಕಗೊಳಿಸಿದಂತಹ ಮಹಿಳಾಪರ ಹೋರಾಟಗಾರರು ಕೂಡ ಆಗಿದ್ದರು ಎಂದಯ ಸ್ಮರಿಸಿದರು.

ಉಪನ್ಯಾಸಕ ಬಾಗೂರು ಪ್ರಸನ್ನ, ಬಹುಜನ ಚಳುವಳಿಯ ಮುಖಂಡ ಕುಂದೂರು ರಾಜು ಮಾಸ್ಟರ್, ರಾಮಚಂದ್ರ, ರಾಮು, ಮಾದಿಹಳ್ಳಿ ಮಂಜು, ಬಾಗೂರು ಉಮೇಶ್, ಬಾಗೂರು ಕುಮಾರ್, ಮಂಜುನಾಥ್, ಶಂಕರ್, ಶೇಖರ್, ಶೃತಿ ಮತ್ತಿತರರು ಹಾಜರಿದ್ದರು.

# ರಾಜ್ಯದಲ್ಲಿ ವಾರದವರೆಗೆ ಮಳೆ ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದಲ್ಲಿ ಬಿಸಿಲಿನ ಆರ್ಭಟ ವಿಪರೀತವಾಗಿದೆ. ಕಲ್ಯಾಣ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ತಾಪಮಾನ 40 ಡಿಗ್ರಿ ದಾಟಿದ್ದು, ಬಿಸಿಲಿನ ಝಳಕ್ಕೆ ಜನ ಕಂಗಾಲಾಗಿದ್ದಾರೆ. ಇನ್ನು ಬಿಸಿಲಿನ ತಾಪದಿಂದ ತಪ್ಪಿಸಿಕೊಳ್ಳಲು ನಾನಾ ಮಾರ್ಗ ಅನುಸರಿಸುತ್ತಿದ್ದಾರೆ. ಈ ಬಿಸಿಲಿನ ಬೇಗೆಯ ನಡುವೆಯೇ ವರುಣನ ಆಗಮನದ ಮುನ್ಸೂಚನೆ ಸಿಕ್ಕಿದೆ. ಈಗಾಗಲೇ ಉತ್ತರ ವಲಯಗಳಲ್ಲಿ ಸ್ವಲ್ಪಮಟ್ಟಿನ ಮಳೆ ಕಂಡು ಬಂದಿದ್ದು, ಮುಂದಿನ ಒಂದು ವಾರದವರೆಗೆ ರಾಜ್ಯದಲ್ಲಿ ಮಳೆ ಸೂಚನೆ ಹೆಚ್ಚಿದೆ ಎಂದು ಹವಾಮಾನ ಇಲಾಖೆ ತಜ್ಞ ಸಿ.ಎಸ್. ಪಾಟೀಲ್ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಸೋಮವಾರ ಮಾತನಾಡಿರುವ ಹವಾಮಾನ ಇಲಾಖೆ ತಜ್ಞ ಸಿ.ಎಸ್. ಪಾಟೀಲ್, ತಾಪಮಾನದ ವೈಪರಿತ್ಯದಿಂದ ಅಕಾಲಿಕ ಮಳೆ ಸಾಧ್ಯತೆ ಸಹ ಹೆಚ್ಚಿದೆ. ಈಗಾಗಲೇ ಉತ್ತರ ವಲಯಗಳಲ್ಲಿ ಸ್ವಲ್ಪ ಮಟ್ಟಿನ ಮಳೆ ಕಂಡು ಬಂದಿದ್ದು, ಮುಂದಿನ ಒಂದು ವಾರದವರೆಗೆ ರಾಜ್ಯದಲ್ಲಿ ಮಳೆ ಸೂಚನೆ ಹೆಚ್ಚಿದೆ ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯದ ಅನೇಕ ಜಿಲ್ಲೆಗಳಲ್ಲಿ 40 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಟಿದೆ. ನಗರದಲ್ಲಿನ ಬಿಸಿಲಿನ ತಾಪಮಾನ ಹಳ್ಳಿಗಳಲ್ಲಿನ ಭಾಗಗಳಿಗೆ ಹೋಲಿಸಿದರೆ, ಹಳ್ಳಿಗಳಲ್ಲಿ ಬಿಸಿಲಿನ ತಾಪಮಾನ 2 ಡಿಗ್ರಿ ಸೆಲ್ಸಿಯಸ್ ನಷ್ಟು ಹೆಚ್ಚಿದ್ದು, ಬಿಸಿಲಿನಲ್ಲಿ ಓಡಾಟ ಕಡಿಮೆ ಮಾಡಿದರೆ ಉತ್ತಮ ಎಂದು ಸಲಹೆ ನೀಡಿದ್ದಾರೆ.

# ಉತ್ತಮ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ಶೌಚಾಲಯ ಬಳಸಬೇಕು

## ಅಧಿಕಾರ ಇದ್ದಾಗ ಉತ್ತಮ ಕೆಲಸ ಮಾಡಬೇಕು: ಮಾಜಿ ಎಂಎಲ್ಸಿ ಗೋಪಾಲಸ್ವಾಮಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಾಂಕ್ರಾಮಿಕ ರೋಗಗಳು ಹರಡಬಾರದು ಹಾಗೂ ಆರೋಗ್ಯ ಉತ್ತಮವಾಗಿ ಇರಬೇಕೆಂದರೆ ಪ್ರತಿಯೊಬ್ಬ ನಾಗರೀಕರು ಶೌಚಾಲಯ ಬಳಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ತಿಳಿಸಿದರು.

ತಾಲೂಕಿನ ಬಾಗೂರು ಬೀಚಗೊಂಡನಹಳ್ಳಿ ಗ್ರಾಮದ ಮಾರುತಿ ದೇವಾಲಯದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿದ್ದು ಶೌಚಾಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು, ಬೀಚಗೊಂಡನಹಳ್ಳಿ ಗ್ರಾಮದ ಮಾರುತಿ ದೇವಾಲಯಕ್ಕೆ ನಿತ್ಯವೂ ನೂರಾರು ಮಂದಿ ಭಕ್ತರು ಆಗಮಿಸುತ್ತಾರೆ ಶುಕ್ರವಾರ ಸಾವಿರಕ್ಕೂ ಹೆಚ್ಚು ಭಕ್ತರು ಆಗಮಿಸಿ ತಂಗುವುದರಿಂದ ಭಕ್ತರಿಗೆ ಶೌಚಾಲಯದ ಸಮಸ್ಯೆ ಇತ್ತು, ಗ್ರಾಮಸ್ಥರ ಮನವಿ ಮೇರೆಗೆ ನಿರ್ಮಾಣ ಮಾಡಲಾಗಿದೆ ಎಂದರು.



ರಾಜಕಾರಣಿಗಳಿಗೆ ಸಾರ್ವಜನಿಕರು ಅಧಿಕಾರ ನೀಡುತ್ತಾರೆ. ಅಧಿಕಾರ ಲಭಿಸಿದಾಗ ಜನತೆ ನೆನಪು ಮಾಡಿಕೊಳ್ಳುವ ಕೆಲಸ ಮಾಡಬೇಕು, ಜನಪ್ರತಿನಿಧಿಗಳು ಮಾಡುವ ಕೆಲಸ ಶಾಶ್ವತವಾಗಿ ಇರುತ್ತದೆ, ಅಧಿಕಾರ ಪ್ರತಿ ಐದು ವರ್ಷಕ್ಕೆ ಒಮ್ಮೆ ಬದಲಾಗುತ್ತದೆ. ಆದರೆ ಮಾಡಿದ ಒಳ್ಳೆಯ ಕೆಲಸವನ್ನು ಸದಾ ನೆನಪು ಮಾಡಿಕೊಳ್ಳುತ್ತಾರೆ ಎಂದು ಹೇಳಿದರು.

ರಾಜಕಾರಣಿಗಳು ಸ್ವಹಿತಕ್ಕಾಗಿ ಗ್ರಾಮಗಳಲ್ಲಿ ಗುಂಪುಗಾರಿಕೆ ಮಾಡುವುದು ತರವಲ್ಲ, ಇದರಿಂದ ಗ್ರಾಮದ ನೆಮ್ಮದಿ ಹಾಳಾಗುತ್ತದೆ, ಅಭಿವೃದ್ಧಿ ಕೆಲಸ ಮಾಡಿಸಿ ಜನರ ಮನಸ್ಸು ಗೆಲ್ಲಬೇಕು ಹೊರತು ಸ್ವಹಿತಕ್ಕಾಗಿ ಒಡೆದು ಆಳುವ ನೀತಿ ಅನುಸರಿಸಬಾರದು ಎಂದು ತಿಳಿಸಿದರು.

ಗ್ರಾಮದ ಮುಖಂಡರು ಚುನಾವಣೆ ವೇಳೆಯಲ್ಲಿ ರಾಜಕೀಯ ಮಾಡಲಿ, ಚುನಾವಣೆ ಮುಗಿದ ಮೇಲೆ ಸಹೋದರರಂತೆ ಬದುಕಬೇಕು. ಇಲ್ಲದೆ ಹೋದರೆ ಗ್ರಾಮದ ನೆಮ್ಮದಿ ಹಾಳಾಗುತ್ತದೆ, ಬೀಚಗೊಂಡನ ಹಳ್ಳಿ ಗ್ರಾಮಸ್ಥರು ಎಲ್ಲಾ ಪಕ್ಷದ ಮುಖಂಡರೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಅಭಿವೃದ್ಧಿ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ ಇದು ಗ್ರಾಮಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದು ನುಡಿದರು.

ನಗರ ಯೋಜನಾ ಪ್ರಾಧಿಕಾರ ಮಾಜಿ ಅಧ್ಯಕ್ಷ ಅಣತಿ ಆನಂದ್, ಅಣತಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಬಿ.ಟಿ.ಚಂದ್ರಶೇಖರ್, ಬಿ.ಟಿ.ಧರ್ಮ, ಬಿ.ಜೆ.ರಮೇಶ್, ನಾಗೇಶ್, ಮುಖಂಡರಾದ ಸಂತೋಷ್, ಬಿ.ಜೆ.ನಂಜೇಗೌಡ, ಜಯರಾಂ, ವಳಗೇರಹಳ್ಳಿ ರಾಮು, ದೇವಾಲಯ ಭಕ್ತರು ಹಾಗೂ ಬಿಚಗೊಂಡನಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

# ಬಸವೇಶ್ವರರ ವಚನಗಳು ಇಂದಿಗೂ ಪ್ರಸ್ತುತ

• ಪ್ರಜೋದಯ ವರದಿ

**ಹಾಸನ:** ನಗರದ ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾಶಾಲೆಯಲ್ಲಿ ಸೋಮಾರ ಬಸವ ಜಯಂತಿಯನ್ನು ಸಂಭ್ರಮ-ಸಡಗರದಿಂದ ಆಚರಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ನಟರಾಜ್.ಎಂ ಅವರು ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಗೌರವ ಸೂಚಿಸಿ ಮಾತನಾಡಿ, ಭಕ್ತಿ ಭಂಡಾರಿ ಬಸವಣ್ಣನವರ ತತ್ವ ಸಿದ್ಧಾಂತಗಳು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ, ಇಡೀ ಜಗತ್ತೀಗೆ ಸಮಾನತೆಯನ್ನು ಸಾರುವ ತತ್ವಗಳಾಗಿವೆ. ಅವರ ವಚನಗಳು ಅಂದಿನಿಂದ ಇಂದಿಗೂ ಕೂಡ ಪ್ರಸ್ತುತವಾಗಿವೆ ಎಂದರು.



ಅನುಭವ ಮಂಟಪದ ರೂವಾರಿಗಳಾದ ಕ್ರಾಂತಿಕಾರಿ ಬಸವಣ್ಣನವರು 12ನೇ ಶತಮಾನದ ಅತಿದೊಡ್ಡ ಸಮಾಜ ಸುಧಾರಕರಾಗಿದ್ದಾರೆ. ಜಾತಿ-ಮತ, ಮೇಲು- ಕೀಳು, ಬಡವ-ಬಲ್ಲಿದ ಎಂಬ ಎಲ್ಲಾ ತಾರತಮ್ಯಗಳಿಗೆ ನಾಂದಿ ಹಾಡಿ ಸಮಾಜಕ್ಕೆ ಉತ್ತಮವಾದ ಸಂದೇಶಗಳನ್ನು ತಮ್ಮ ವಚನಗಳ ಮೂಲಕ ನೀಡಿದರು. ಉತ್ತಮ ನಾಗರೀಕ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸಿದ ಬಸವಣ್ಣನವರ ಸಿದ್ಧಾಂತಗಳನ್ನು ನಾವೆಲ್ಲರೂ ಪಾಲಿಸಬೇಕೆಂದು ಅವರು ಇದೇ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಟ್ರಸಿ ಆಶಾ ನಟರಾಜ್, ಶಿಕ್ಷಕರು, ಶಾಲಾ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ಸಮಸಮಾಜ ನಿರ್ಮಾಣಕ್ಕೆ ಬಸವಣ್ಣನ ಕೊಡುಗೆ ಅಪಾರ

• ಪ್ರಜೋದಯ ವರದಿ

**ಸಕಲೇಶಪುರ:** 12ನೇ ಶತಮಾನದಲ್ಲಿಯೇ ಸಮಸಮಾಜದ ನಿರ್ಮಾಣಕ್ಕಾಗಿ ಹೋರಾಡಿದ ಬಸವಣ್ಣನವರು ಅನುಭವ ಮಂಟಪದ ಮೂಲಕ ಎಲ್ಲ ಸಮಾಜದವರನ್ನೂ ಒಗ್ಗೂಡಿಸಿ ಸಮಾನತೆ ಸ್ಥಾಪಿಸಲು ಶ್ರಮಿಸಿದರು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



ಸೋಮವಾರ ತಾಲ್ಲೂಕು ಕಚೇರಿಯಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಾತಿ-ವರ್ಣರಹಿತ, ಶೋಷಣೆಯಿಲ್ಲದ ಸಮಾಜ ನಿರ್ಮಾಣವೇ ಬಸವಾದಿ ಶರಣರ ಉದ್ದೇಶವಾಗಿತ್ತು. ಹನ್ನೆರಡನೇ ಶತಮಾನದಲ್ಲಿಯೇ ತಮ್ಮ ವಚನಗಳ ಮೂಲಕ ಸಾಮಾಜಿಕ ಸುಧಾರಣೆಗೆ ದಾರಿ ತೋರಿದ ಬಸವಣ್ಣನವರು ಪ್ರಜಾಪ್ರಭುತ್ವದ ತಳಹದಿಯ ಸಮಾಜದ ಕಲ್ಪನೆಯನ್ನು ನೀಡಿದ ಮಹಾನ್ ದಾರ್ಶನಿಕರು ಎಂದು ಹೇಳಿದರು.

"ಜಾತಿ ಬೇಡ" ಎಂದು ಹೋರಾಡಿದ ಬಸವಣ್ಣನವರನ್ನೇ ಇಂದಿನ ಸಮಾಜ ಜಾತಿಗೆ ಕಟ್ಟಿಹಾಕಿರುವುದು ವಿಷಾದನೀಯ ಸಂಗತಿ. ಸರ್ವರಿಗೂ ಸಮ ಬಾಳು-ಸಮಪಾಲು ಎಂಬ ತತ್ವ ಇಂದಿನ ದಿನಗಳಲ್ಲಿ ನಿಜವಾಗಿ ಸಾಕಾರಗೊಳ್ಳಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ ಎಂದು ಕರೆಯಲಾಗುತ್ತದೆ. ಮಾನವೀಯತೆ, ಕಾಯಕನಿಷ್ಠೆ ಮತ್ತು ಧರ್ಮದ ಬುನಾದಿಯನ್ನು ಬಲಪಡಿಸಿದ ಅವರು "ಕಾಯಕವೇ ಕೈಲಾಸ", "ದಯವೇ ಧರ್ಮದ ಮೂಲವಯ್ಯ" ಎಂಬ ವಚನಗಳ ಮೂಲಕ ಮಾನವತಾವಾದವನ್ನು ಸಾರಿದರು ಎಂದು ಬಣ್ಣಿಸಿದರು.

ಸಾಮಾಜಿಕ ಕಾರ್ಯಕರ್ತ ಹಾಗೂ ವೀರಶೈವ ಸಮಾಜದ ಕಾರ್ಯದರ್ಶಿ ಎಡೆಹಳ್ಳಿ ಆರ್.ಮಂಜುನಾಥ್ ಮಾತನಾಡಿ, ಬಸವಣ್ಣನವರು ಜಾತಿ ವ್ಯವಸ್ಥೆಯ ವಿರುದ್ಧ ವಚನಗಳ ಮೂಲಕ ಸಮಾನತೆಯ ಸಂದೇಶ ಸಾರಿದ ದಾರ್ಶನಿಕರು. ಅವರ ವಚನಗಳ ಶಕ್ತಿ ವಿಶ್ವದ ಯಾವುದೇ ಸಾಹಿತ್ಯದೊಂದಿಗೆ ಸಮವಾಗಿ ತೂಗುತ್ತದೆ. ಮಹಿಳಾ ಸಮಾನತೆಯ ಪರವಾಗಿ ಬಸವಣ್ಣನವರು ನೀಡಿದ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ನಿವೃತ್ತ ತಹಸೀಲ್ದಾರ್ ಅಣ್ಣೇಗೌಡ ಮಾತನಾಡಿ, ಸರ್ಕಾರಿ ಕಾರ್ಯಕ್ರಮಗಳಿಗೆ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವೀರಶೈವ ಸಮಾಜದ ದಿವಾನ್ ದೇವರಾಜ್, ಸಂಗಪ್ಪ, ಆರ್.ಎಫ್.ಓ ಹೇಮಂತ್ ಕುಮಾರ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಪ್ರಕಾಶ್ ಕುಮಾರ್, ಸಬ್‌ಇನ್ಸ್ಪೆಕ್ಟರ್ ಮಹೇಶ್ ಇತರರು ಉಪಸ್ಥಿತರಿದ್ದರು.

## ಚಳುವಳಿ, ಸಾಹಿತ್ಯ, ಸಂಗೀತ ಸಮಾಜದ ಪರಿವರ್ತನೆಗೆ ಪೂರಕವಾದ ಶಕ್ತಿಶಾಲಿ ಮಾಧ್ಯಮ

# ಡ್ರಗ್ಸ್ ಮಹಾಮಾರಿಯಿಂದ ರಕ್ಷಿಸಲು ಜಾಗೃತಿ ಅತ್ಯಗತ್ಯ

• ಪ್ರಜೋದಯ ವರದಿ

**ಸಕಲೇಶಪುರ:** ಯುವಜನತೆಯನ್ನು ಕಾಡುತ್ತಿರುವ ಮಾದಕ ದ್ರವ್ಯಗಳ ವಿರುದ್ಧ ಜನಜಾಗೃತಿ ಮೂಡಿಸುವ ಸಲುವಾಗಿ ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ವತಿಯಿಂದ ಪಟ್ಟಣದ ನಾಡಪ್ರಭು ಕೆಂಪೇಗೌಡ ಪ್ರತಿಮೆ ಆವರಣದಲ್ಲಿ ಆಯೋಜಿಸಿದ್ದ ಸನ್ಮಾನ, ಪುಸ್ತಕ ಬಿಡುಗಡೆ ಹಾಗೂ ಸಂಗೀತ ಸಂಜೆ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು, ಚಳುವಳಿ, ಸಾಹಿತ್ಯ ಮತ್ತು ಸಂಗೀತವು ಸಮಾಜದ ಪರಿವರ್ತನೆಗೆ ಪೂರಕವಾದ ಶಕ್ತಿಶಾಲಿ ಮಾಧ್ಯಮಗಳಾಗಿವೆ. ಡ್ರಗ್ಸ್ ಎಂಬ ಮಹಾಮಾರಿಯಿಂದ ಯುವಜನತೆಯನ್ನು ರಕ್ಷಿಸಲು ಕಲಾವಿದರು ಹಾಗೂ ಸಾಹಿತಿಗಳು ಜಾಗೃತಿ ಮೂಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ರಾಜ್ಯ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ದಲಿತ ಮುಖಂಡ ಹೆತ್ತೂರು ಅಣ್ಣಯ್ಯ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಹಿರಿಯ ರಂಗಕರ್ಮಿ ಪ್ರಸಾದ್ ರಕ್ಷಿದಿ ಅವರು ಲೇಖಕಿ ಡಯಾನಾ ಡಿಸೋಜ ಅವರ ಅಂತರಂಗದ ಗುಟ್ಟು ಹಾಗೂ ಸಾಹಿತಿ ವಿಶ್ವಾಸ್‌ಗೌಡ ಅವರ ದೇವರನ್ನು ಹುಡುಕಬೇಕಾಗಿದೆ ಕೃತಿಗಳನ್ನು ಲೋಕಾರ್ಪಣೆ ಮಾಡಿದರು.



ಆಂದೋಲನದ ಸಂಚಾಲಕ ಮಲ್ನಾಡ್ ಮೆಹಬೂಬ್ ಪ್ರಾಸ್ತಾವಿಕವಾಗಿ ಮಾತನಾಡಿ, ಡ್ರಗ್ಸ್ ಮುಕ್ತ ಸಮಾಜ ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಇದರಲ್ಲಿ ಪ್ರತಿಯೊಂದು ಕುಟುಂಬ ಮತ್ತು ಸಂಘಟನೆಗಳ ಪಾತ್ರವೂ ಮಹತ್ವದ್ದಾಗಿದೆ ಎಂದರು.

ಪಟ್ಟಣದ ಪ್ರಮುಖ ಸಂಘ ಸಂಸ್ಥೆಗಳು ಹಾಗೂ ಸ್ತ್ರೀಶಕ್ತಿ ಸಂಘಗಳು ಈ ಹೋರಾಟಕ್ಕೆ ಬೆಂಬಲ ಸೂಚಿಸುವ ಮೂಲಕ ಕಾರ್ಯಕ್ರಮಕ್ಕೆ ಕಳೆ ತಂದವು. ಸಮಾಜದ ವಿವಿಧ ಸ್ತರದ ಸಂಘಟನೆಗಳು ಹಾಗೂ ಮುಖಂಡರು ಈ ವೇದಿಕೆಯಲ್ಲಿ ಒಂದಾಗುವ ಮೂಲಕ ಮಾದಕ ಮುಕ್ತ ಸಮಾಜದ ನಿರ್ಮಾಣಕ್ಕೆ ದೃಢ ಸಂಕಲ್ಪ ಮಾಡಿದರು. ಕಾರ್ಯಕ್ರಮದ ನಂತರ ನಡೆದ ಸಂಗೀತ ಸಂಜೆಯಲ್ಲಿ ವಿವಿಧ ಕಲಾವಿದರು ಜನಪ್ರಿಯ ಗೀತೆಗಳನ್ನು ಪ್ರಸ್ತುತಪಡಿಸಿ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ಒಕ್ಕಲಿಗರ ಸಂಘದ ಕಾರ್ಯದರ್ಶಿ ಜೈ ಮಾರುತಿ ದೇವರಾಜ್, ಯೋಜನ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಸ್, ಸರ್ಕಾರಿ ನೌಕರರ ಸಂಘದ ಶಾಂತರಾಜ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಯೋಗೇಶ್, ಪತ್ರಕರ್ತ ನಾಗರಾಜ್ ಹೆತ್ತೂರು, ದಲಿತ ಮುಖಂಡ ನಲ್ಲುಲ್ಲಿ ಈರಪ್ಪ, ನಂಜಮ್ಮ ಮಹಿಳಾ ಸಮಾಜದ ಅಧ್ಯಕ್ಷೆ ಕೌಸಲ್ಯ ಲಕ್ಷ್ಮಣ್‌ಗೌಡ, ವೀರಶೈವ ಸಮಾಜದ ಅರ್ಚನಾ ಜಯಂತ್, ಮಹಿಳಾ ಮಾರ್ಗದರ್ಶಿ ಅಸೋಸಿಯೇಟ್ ಅಧ್ಯಕ್ಷೆ ಕಲ್ಪನಾ ಕೀರ್ತಿ, ಅಖಿಲ ಕರ್ನಾಟಕ ವಾದ್ಯಗೋಷ್ಠಿ ಕಲಾವಿದರ ಸಂಘದ ರಮೇಶ್, ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಸುಧೀರ್, ನಿಕಟ ಪೂರ್ವ ಅಧ್ಯಕ್ಷ ಜೈ ಭೀಮ್ ಮಂಜು, ಪತ್ರಕರ್ತ ಅಕ್ಬರ್ ಜುನೈದ್, ಕಾರ್ಮಿಕ ಮುಖಂಡೆ ಸೌಮ್ಯ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಗಗನ್, ಮಲೆನಾಡು ರಕ್ಷಣಾ ವೇದಿಕೆಯ ಅಧ್ಯಕ್ಷ ಮಂಜುದೇವ್, ನಾಗರೀಕ ಸಂರಕ್ಷಣಾ ಸಮಿತಿಯ ಅಧ್ಯಕ್ಷ ರವಿಕುಮಾರ್, ರೋಟರಿ ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ್, ಆದಿ ದ್ರಾವಿಡ ಪೌರ ಕಾರ್ಮಿಕರ ಸಂಘದ ನಂಜಯ್ಯ, ರಾಕೇಶ್ ಮೆನಿಜೆಸ್, ಜಿಲ್ಲಾ ಅಧ್ಯಕ್ಷ ವಿರೇಶ ವಲಳಹಳ್ಳಿ (ಕರ್ನಾಟಕ ದಲಿತ ಸಂಘರ್ಷ ಸಮಿತಿ), ನಿವೃತ್ತ ಅಧಿಕಾರಿ ಅಣ್ಣೆಗೌಡರು, ಪುರಸಭೆ ಸದಸ್ಯೆ ಅನ್ನಪೂರ್ಣ ಶ್ರೀ ಶೈಲ, ಸಮಾಜಿಕ ಕಾರ್ಯಕರ್ತೆ ಸಾಯಿರಾ ಇನ್ನಿತರರು ಹಾಜರಿದ್ದರು.

## ಶಾಂತಿ ಮಾತುಕತೆ ಸಾಧ್ಯವಿಲ್ಲ: ಇರಾನ್

» ಮೊದಲನೇ ಪುಟದಿಂದ

ಇಂಧನ ಮಾರುಕಟ್ಟೆ ಮತ್ತು ಪ್ರಾದೇಶಿಕ ಶಾಂತಿಗೆ ದೊಡ್ಡ ಹೊಡೆತ ನೀಡಬಹುದು. ವಿಶೇಷವಾಗಿ ಹೊರ್ಮುಜ್ ಜಲಸಂಧಿ ಜಗತ್ತಿನ ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವುದರಿಂದ, ಇಲ್ಲಿ ಯಾವುದೇ ಅಸ್ಥಿರತೆ ಜಾಗತಿಕ ಆರ್ಥಿಕತೆಯ ಮೇಲೂ ಪರಿಣಾಮ ಬೀರುತ್ತದೆ ಎಂದು ಹೇಳಲಾಗುತ್ತಿದೆ.

**ಇರಾನ್ ಹಡಗು ವಶಕ್ಕೆ ಪಡೆದ ಅಮೇರಿಕಾ:** ಅಮೇರಿಕಾ ಸೇನೆ ಇರಾನ್ ಧ್ವಜದ ಸರಕು ಹಡಗೊಂದನ್ನು ವಶಪಡಿಸಿ ಕೊಂಡಿದ್ದು, ಅದರ ಬೆನ್ನಲ್ಲೇ ಅಮೇರಿಕಾ ಮತ್ತು ಇರಾನ್ ನಡುವಿನ ಉದ್ವಿಗ್ನತೆ ಮತ್ತೆ ಉಲ್ಬಣಗೊಂಡಿದೆ. ಈ ಘಟನೆ ಪ್ರಗತಿಯಲ್ಲಿರುವ ಶಾಂತಿ ಒಪ್ಪಂದವನ್ನು ಸಂಪೂರ್ಣ ಕುಸಿತಗೊಳ್ಳುವ ಸಾಧ್ಯತೆಗಳಿದ್ದು, ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆತಂಕ ಹೆಚ್ಚಾಗುವಂತೆ ಮಾಡಿದೆ. ಟೌಸ್ಕಾ ಎಂಬ ಇರಾನ್ ಹಡಗು ಓಮನ್ ಸಮುದ್ರದ ಬಳಿ ಅಮೇರಿಕಾ ನೌಕಾ ಪಡೆಯ ಎಚ್ಚರಿಕೆಗಳನ್ನು ನಿರ್ಲಕ್ಷಿಸಿತು ಎಂದು ಅಮೆರಿಕಾ ಆರೋಪಿಸಿದೆ. ಇದರ ನಂತರ ಅಮೆರಿಕಾ ನೌಕಾ ಪಡೆಯ ಡಿಸ್ಟ್ರಾಯರ್ ಹಡಗು ಅದರ ಎಂಜಿನ್ ಭಾಗಕ್ಕೆ ಗುಂಡು ಹಾರಿಸಿ ಹಡಗನ್ನು ನಿಷ್ಕ್ರಿಯಗೊಳಿಸಿದೆ. ನಂತರ ಅಮೇರಿಕಾ ನೌಕಾ ಪಡೆ ಹಡಗನ್ನು ವಶಕ್ಕೆ ಪಡೆದು ಅದರೊಳಗಿನ ಸರಕುಗಳನ್ನು ಪರಿಶೀಲನೆ ನಡೆಸಿದೆ.

# ಮುಸ್ಲಿಮರ ಕಡೆಗಣನೆ ಸಹಿಸುವುದಿಲ್ಲ

## ಕೈ ಹೈಕಮಾಂಡ್‌ಗೆ ಸುದೀರ್ಘ ಪತ್ರ | ದಾವಣಗೆರೆ ಉಪ ಚುನಾವಣೆ ಪ್ರಹಸನ ಉಲ್ಲೇಖ

• ಪ್ರಜೋದಯ ವರದಿ

**ಬೆಂಗಳೂರು:** ಮುಸ್ಲಿಂ ಸಮುದಾಯದ ಜೊತೆ ಕಾಂಗ್ರೆಸ್ ಅನ್ಯಾಯಯುತವಾಗಿ ನಡೆದುಕೊಳ್ಳುತ್ತಿದೆ ಎಂದು ಸಮುದಾಯದ ನಾಯಕರು ಹೈಕಮಾಂಡ್‌ಗೆ ಪತ್ರ ರವಾನಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಎಐಸಿಸಿ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗು ಪ್ರಮುಖ ಕಾಂಗ್ರೆಸ್ ನಾಯಕರನ್ನು ಉದ್ದೇಶಿಸಿ ಪತ್ರ ಬರೆಯಲಾಗಿದೆ. ಪತ್ರಕ್ಕೆ ಜಮಾಅತ್ ಎ ಅಹ್ಲೆ ಸುನ್ನತ್ ಕರ್ನಾಟಕದ ಅಧ್ಯಕ್ಷ ಮೌಲಾನಾ ಸೈಯದ್ ತನ್ವೀರ್ ಹಾಶ್ಮಿ, ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆಗಳು, ಬೀದರ್ ಅಧ್ಯಕ್ಷ ಅಬ್ದುಲ್ ಖದೀರ್ ಸಾಹೇಬ್, ವೆಲ್ಫೇರ್ ಆಫ್ ಹ್ಯುಮಾನಿಟಿ ಫೌಂಡೇಶನ್ ಅಧ್ಯಕ್ಷ ಮೌಲಾನಾ ಶಬ್ಬೀರ್ ಅಹ್ಮದ್ ನದ್ವಿ, ದಿ ಮುಸ್ಲಿಮ್ ಸೆಂಟ್ರಲ್ ಕಮಿಟಿ ಅಧ್ಯಕ್ಷ ಕೆ.ಎಸ್.ಮೊಹಮ್ಮದ್ ಮಸೂದ್ ಹಾಗು ವಿವಿಧ ಸಂಘಟನೆಗಳ ಪ್ರಮುಖರು ಸಹಿ ಹಾಕಿದ್ದಾರೆ.

ಕರ್ನಾಟಕದ ಕಾಂಗ್ರೆಸ್ ಸರ್ಕಾರ ಹಾಗೂ ಪಕ್ಷ ರಾಜ್ಯದ ಮುಸ್ಲಿಂ ಸಮುದಾಯವನ್ನು ನಡೆಸಿಕೊಳ್ಳುತ್ತಿರುವ ರೀತಿಯಿಂದ ತೀವ್ರವಾಗಿ ನೊಂದು ರಾಜ್ಯದ ಎಲ್ಲಾ ಪ್ರದೇಶಗಳ ಪ್ರಮುಖ



ಮುಸ್ಲಿಂ ಸಂಘಟನೆಗಳು, ಸಂಘ ಸಂಸ್ಥೆಗಳು ಹಾಗು ಒಕ್ಕೂಟಗಳ ಪರವಾಗಿ ನಾವು ಈ ಪತ್ರ ಬರೆಯುತ್ತಿದ್ದೇವೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದ ಮುಸ್ಲಿಮರು ಇಡೀ ದೇಶಕ್ಕೆ ಮಾದರಿಯಾಗುವಂತಹ ಒಂದು ಧನಾತ್ಮಕ ನಿರ್ಧಾರ ತೆಗೆದುಕೊಂಡು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು. ಕಾಂಗ್ರೆಸ್ ಅಲ್ಲದೆ ಬೇರೆ ಪಕ್ಷಗಳ ಆಯ್ಕೆ ಇದ್ದರೂ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಜಾತ್ಯತೀತ ಸರ್ಕಾರ ಬರಬೇಕೆಂಬ ಕಾರಣಕ್ಕಾಗಿ ಮುಸ್ಲಿಮರು ಕಾಂಗ್ರೆಸ್‌ಗೆ ಒಗ್ಗಟ್ಟಾಗಿ ಬೆಂಬಲಿಸಿದರು. ಅದರ ಪರಿಣಾಮ ಕಾಂಗ್ರೆಸ್ ಭರ್ಜರಿ ಬಹುಮತ ಪಡೆದು ಅಧಿಕಾರಕ್ಕೆ ಬಂತು. ಆದರೆ ಅಧಿಕಾರಕ್ಕೆ ಬಂದ ದಿನದಿಂದಲೇ ಕಾಂಗ್ರೆಸ್ ಪಕ್ಷ ತನ್ನನ್ನು ಅಧಿಕಾರಕ್ಕೆ ತರುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಮುಸ್ಲಿಂ ಸಮುದಾಯವನ್ನು ನಿರ್ಲಕ್ಷಿಸುತ್ತಲೇ ಬಂದಿದೆ.

**ಕೊಟ್ಟ ಭರವಸೆ ಈಡೇರಿಸಿಲ್ಲ**

ಸರ್ಕಾರದಲ್ಲಿ ಆಡಳಿತಶಾಹಿಯಲ್ಲಿ, ಇತರ ಪ್ರಮುಖ ನೇಮಕಾತಿಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಈ ಸರ್ಕಾರ ಸೂಕ್ತ ಪ್ರಾತಿನಿಧ್ಯ ಕೊಡಲೇ ಇಲ್ಲ. ಸಮುದಾಯಕ್ಕೆ ಕೊಟ್ಟಿದ್ದ ಭರವಸೆಗಳನ್ನು ಈಡೇರಿಸಲಿಲ್ಲ. ಈ ಬಗ್ಗೆ ಆಗಾಗ ಸರ್ಕಾರದ, ಪಕ್ಷದ ಗಮನಕ್ಕೆ ತಂದರೂ ಯಾವುದೇ ಸೂಕ್ತ ಸ್ಪಂದನೆ ಸಿಗಲಿಲ್ಲ ಹಾಗು ಕೊರತೆ ತುಂಬುವ ಕ್ರಮ ಕೈಗೊಳ್ಳಲಿಲ್ಲ.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯ ಟಿಕೆಟ್ ಹಂಚಿಕೆ ಹಾಗು ಮತದಾನದ ಬಳಿಕ ಕಾಂಗ್ರೆಸ್ ನಡೆದುಕೊಂಡಿರುವ ರೀತಿಯಿಂದ ರಾಜ್ಯದ ಮುಸ್ಲಿಂ ಸಮುದಾಯಕ್ಕೆ ಆಘಾತವಾಗಿದೆ. ನಾವು ಇಷ್ಟು ಗಟ್ಟಿಯಾಗಿ ಬೆಂಬಲಿಸಿದ ಪಕ್ಷ ನಮ್ಮೊಂದಿಗೆ ಇಷ್ಟು ಕೆಟ್ಟದಾಗಿ ಹೇಗೆ ನಡೆದುಕೊಳ್ಳಲು ಸಾಧ್ಯ ಎಂಬ ಪ್ರಶ್ನೆ ರಾಜ್ಯದ ಮುಸಲ್ಮಾನರನ್ನು ಕಾಡುತ್ತಿದೆ. ನಾವು ಕಾಂಗ್ರೆಸ್‌ಗೆ ಬೇಷರತ್ತಾಗಿ ಬೆಂಬಲ ನೀಡಿದ್ದೇ ನಮ್ಮ ಅಪರಾಧವೇ ಎಂಬ ಭಾವನೆ ಮುಸಲ್ಮಾನರಲ್ಲಿ ಈಗ ಮನೆ ಮಾಡುತ್ತಿದೆ. ಹೀಗೇ ಮುಂದುವರಿದರೆ ನಾವೂ ನಮ್ಮ ರಾಜಕೀಯ ಆಯ್ಕೆಗಳನ್ನು ಮುಕ್ತವಾಗಿಡಬೇಕು ಎಂಬ ಆಲೋಚನೆ ಈಗ ಸಮುದಾಯದಲ್ಲಿ ತೀವ್ರವಾಗಿ ಬೆಳೆಯುತ್ತಿದೆ. ಮೊದಲು ನ್ಯಾಯವಾಗಿ ನೀಡಲೇಬೇಕಾಗಿದ್ದ ಟಿಕೆಟ್ ಅನ್ನು ನಿರಾಕರಿಸಲಾಯಿತು. ಹಾಗೆ ಮಾಡುವಾಗ ಸಮುದಾಯದ ನ್ಯಾಯಯುತ ಬೇಡಿಕೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಯಿತು. ಅಷ್ಟೇ ಅಲ್ಲ, ಟಿಕೆಟ್ ಕೇಳಿದ್ದೇ ಅಪರಾಧ ಎಂಬಂತೆ ಕಾಂಗ್ರೆಸ್ ವರಿಷ್ಠರು ಮುಸ್ಲಿಂ ಸಮುದಾಯದ ಜೊತೆ ನಡೆದುಕೊಂಡರು.

ಇಷ್ಟು ಸಾಲದ್ದಕ್ಕೆ, ಉಪಚುನಾವಣೆಗೆ ಮತದಾನ ಮುಗಿದ ಕೂಡಲೇ ಮುಸ್ಲಿಂ ಸಮುದಾಯದ ಜೊತೆ ಹಗೆ ಸಾಧಿಸುವ ಹಾಗೆ ಕಾಂಗ್ರೆಸ್ ಪಕ್ಷ ನಡೆದುಕೊಂಡಿತು. ದಶಕಗಳಿಂದ ಪಕ್ಷಕ್ಕಾಗಿ ದುಡಿದ ಹಿರಿಯ ಮುಸ್ಲಿಂ ನಾಯಕರನ್ನು ಯಾವುದೇ ಸೂಕ್ತ ಕಾರಣ ನೀಡದೆ, ವಿವರಣೆಗೆ ಅವಕಾಶವನ್ನೂ ನೀಡದೆ ಏಕಾಏಕಿ ವಜಾ ಮಾಡಿ ಮನೆಗೆ ಕಳಿಸಲಾಯಿತು. ಕಾಂಗ್ರೆಸ್ ಪಕ್ಷದ ಈ ನಡೆ ರಾಜ್ಯದ ಮುಸ್ಲಿಂ ಸಮುದಾಯಕ್ಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಟಿಕೆಟ್ ನೀಡಲಿಲ್ಲ ಎಂಬ ನೋವಿಗೆ ಸಮಾಧಾನ ಮಾಡಿ ಮದ್ದೆರೆಯಬೇಕಾಗಿದ್ದ ಕಾಂಗ್ರೆಸ್, ಸಮುದಾಯದ ಜೊತೆ ಅತ್ಯಂತ ಸಂವೇದನಾರಹಿತವಾಗಿ ನಡೆದುಕೊಂಡಿದ್ದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಈ ಹಿಂದೆ ನೇರವಾಗಿಯೇ ಪಕ್ಷ ವಿರೋಧಿ ಕೆಲಸ ಮಾಡಿದ್ದ ಪ್ರಬಲ ಸಮುದಾಯಗಳ ಮುಖಂಡರ ವಿರುದ್ಧ ಕಾಂಗ್ರೆಸ್ ಪಕ್ಷ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಈಗ ಪಕ್ಷ ನಿಷ್ಠ ಮುಸ್ಲಿಂ ನಾಯಕರ ವಿರುದ್ಧ ಇಷ್ಟು ತರಾತುರಿಯಲ್ಲಿ ಅತ್ಯಂತ ಕಠಿಣ ಕ್ರಮ ಕೈಗೊಂಡಿ ರುವುದನ್ನು ನೋಡಿದರೆ ಕಾಂಗ್ರೆಸ್‌ನಲ್ಲಿ ಶಿಸ್ತುಕ್ರಮ ಎಂಬುದು ಕೇವಲ ಒಂದು ಸಮುದಾಯಕ್ಕೆ ಸೀಮಿತವೇ ಎಂಬ ಸಂಶಯ ಮೂಡುತ್ತಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

## ಮತ್ತೊಂದು ಹೆಣ್ಣಾನೆಗೆ ರೇಡಿಯೋ ಕಾಲರ್ ಅಳವಡಿಕೆ

• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆ ವತಿಯಿಂದ ಕೈಗೊಳ್ಳಲಾಗಿದ್ದ ಕಾಡಾನೆಗಳ ಕಾರ್ಯಾಚರಣೆಯ ಅಂತಿಮ ಘಟ್ಟವಾದ ಸೋಮವಾರ ಹೆಣ್ಣಾನೆಗೆ ರೇಡಿಯೋ ಕಾಲರ್ ಅಳವಡಿಸುವುದರ ಮೂಲಕ ಮುಕ್ತಾಯಗೊಂಡಿದೆ.



ಭಾನುವಾರ ಕಾನಹಳ್ಳಿ ಅರಣ್ಯದಲ್ಲಿ ತಪ್ಪಿಸಿಕೊಂಡಿದ್ದ ಹೆಣ್ಣಾನೆಗೆ ರೇಡಿಯೋ ಕಾಲರ್ ಅಳವಡಿಸಲು ಅರಣ್ಯಾಧಿಕಾರಿಗಳು ಸೋಮವಾರ ಸಿಬ್ಬಂದಿಗಳೊಂದಿಗೆ ತೆರಳಿ ಕಾಡಾನೆ ಇರುವ ಸ್ಥಳವನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದರು. ಕಾನಹಳ್ಳಿ ಅರಣ್ಯ ಪ್ರದೇಶದ ಹತ್ತಿರದಲ್ಲಿರುವ ಶಿರಗುರ ಎಂಬಲ್ಲಿ ಕಾಡಾನೆಯನ್ನು ಪತ್ತೆ ಹಚ್ಚಲಾಯಿತು. ಆನೆಯನ್ನು ಅನುಭವಿ ವೈದ್ಯರ ತಂಡ ಹಿಂಬಾಲಿಸಿತ್ತು. ಶಿರಗುರದಲ್ಲಿ ಬೆಳಿಗ್ಗೆ 8.30ಕ್ಕೆ ಪತ್ತೆಯಾದ ಕಾಡಾನೆಯು ಒಂದೆಡೆ ನಿಲ್ಲದೇ ನೇರಲಕಟ್ಟೆ, ಕುಂಬಾರಹಳ್ಳಿ, ಶಿರಗುರ, ಸೂಳೇಗುಡ್ಡಕ್ಕೆ ತೆರಳಿತು. ಅದರಿಂದ ಸಿಬ್ಬಂದಿ ಹೈರಾಣಾದರು. ಕೊನೆಗೆ ನೇರಲಮಕ್ಕಿಯ ಕಾನಹಳ್ಳಿ ಅರಣ್ಯ ಪ್ರದೇಶಕ್ಕೆ ಕಾಡಾನೆಗೆ ಚುಚ್ಚುಮದ್ದು ನೀಡಿ ರೇಡಿಯೋ ಕಾಲರ್ ಅಳವಡಿಸಿದರು.

ಸತತವಾಗಿ ನಾಲ್ಕು ದಿನಗಳಿಂದ ಕಾಡಾನೆ ಹಿಡಿಯುವ ಹಾಗು ರೇಡಿಯೋ ಕಾಲರ್ ಅಳವಡಿಸುವ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಸಾಕಾನೆಗಳಾದ ಭೀಮ, ಶ್ರೀಕಂಠ ಆನೆಗಳನ್ನು ಮತ್ತಿಗೋಡು ಶಿಬಿರಕ್ಕೆ ಹಾಗು ಹರ್ಷ, ಧನಂಜಯ, ಶ್ರೀರಾಮ, ಅಯ್ಯಪ್ಪ ಎಂಬ ಆನೆಗಳನ್ನು ದುಬಾರೆಯ ಶಿಬಿರಕ್ಕೆ ವಾಪಾಸ್ ಕಳುಹಿಸಲಾಯಿತು. ಕಾರ್ಯಾಚರಣೆಯಲ್ಲಿ ಡಿಎಫ್‌ಒ ಸೌರಭ್ ಕುಮಾರ್, ಎಸಿಎಫ್ (ಇಟಿಎಫ್) ಉಮಾಪತಿ, ಆರ್‌ಎಫ್‌ಒ ಯತೀಶ್ ಹಾಗು ಸಿಬ್ಬಂದಿ ಇದ್ದರು.

# ಬಸವ ಜಯಂತಿ ಆಯೋಜನೆ ಅವ್ಯವಸ್ಥೆ: ಪ್ರತಿಭಟನೆ

## ಕಾರ್ಯಕ್ರಮ ಬಹಿಷ್ಕರಿಸಿದ ವೀರಶೈವ ಲಿಂಗಾಯತ ಮಹಾಸಭಾ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಅವ್ಯವಸ್ಥೆಯಿಂದ ಕೂಡಿದೆ ಎಂದು ಆರೋಪಿಸಿ ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಘಟಕದ ಪದಾಧಿಕಾರಿಗಳು ಕಾರ್ಯಕ್ರಮ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಕಾರ್ಯಕ್ರಮ ಸ್ಥಳದಲ್ಲಿ ಅಧಿಕಾರಿಗಳ ಗೈರು ಹಾಜರಿ, ಸಭಿಕರ ಕೊರತೆ ಹಾಗು ಬಸವಣ್ಣನವರ ಪುತ್ಥಳಿಗೆ ಪ್ಲಾಸ್ಟಿಕ್ ಹೂಗಳಿಂದ ಅಲಂಕಾರ ಮಾಡಿರುವುದನ್ನು ಖಂಡಿಸಿ ಮಹಾಸಭಾ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಆಗಮಿಸಿದ ಶಾಸಕ ಹೆಚ್.ಕೆ.ಸುರೇಶ್ ಕೂಡ ಪ್ರತಿಭಟನಾಕಾರರೊಂದಿಗೆ ಸೇರಿ ತಾಲ್ಲೂಕು ಆಡಳಿತದ ವಿರುದ್ಧ ದಿಕ್ಕಾರ ಕೂಗಿದರು.

ಏ.14ರಂದು ಕೂಡ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನೂ ಸಮರ್ಪಕವಾಗಿ ಆಚರಿಸದ ಹಿನ್ನಲೆ ದಲಿತ ಪರ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದರು. ಅದರ ಬೆನ್ನಲ್ಲೇ ಬಸವ ಜಯಂತಿಯಲ್ಲಿಯೂ ನಿರ್ಲಕ್ಷ್ಯ ತೋರಿರುವುದು ಆಡಳಿತದ ವೈಫಲ್ಯಕ್ಕೆ ಸಾಕ್ಷಿ ಎಂದು ಪ್ರತಿಭಟನಾಕಾರರು ಆರೋಪಿಸಿದರು.



> **ಮಹಾನೀಯರ ಜಯಂತಿ ಆಚರಣೆಯಲ್ಲಿ ತಾಲ್ಲೂಕು ಆಡಳಿತದ ನಿರ್ಲಕ್ಷ್ಯವನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪಿಸಿ ಸಂಬಂಧಿತ ಅಧಿಕಾರಿಗಳನ್ನು ಅಮಾನತುಗೊಳಿಸುವ ತನಕ ಹೋರಾಟ ಮುಂದುವರೆಸುತ್ತೇನೆ.**
> **-ಹೆಚ್.ಕೆ. ಸುರೇಶ್, ಶಾಸಕ**

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಯುವ ಘಟಕದ ಕಾರ್ಯ ದರ್ಶಿ ವಿಕ್ರಮ್ ಕೌರಿ ಮಾತನಾಡಿ, ಸರ್ಕಾರ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕನಾಗಿ ಘೋಷಿಸಿ ಕಚೇರಿಗಳಲ್ಲಿ ಭಾವಚಿತ್ರ ಹಾಕುವುದು ಮತ್ತು ಜಯಂತಿ ಆಚರಣೆ ಕಡ್ಡಾಯ ಗೊಳಿಸಿದೆ. ಇಲ್ಲಿನ ಆಡಳಿತ ಕಾಟಚಾರದಿಂದ ಕಾರ್ಯಕ್ರಮ ನಡೆಸುತ್ತಿದೆ. ಈ ಬಗ್ಗೆ ಸರ್ಕಾರಕ್ಕೆ ದೂರು ನೀಡಲಾಗುವುದೆಂದು ಎಚ್ಚರಿಸಿದರು.

ಪುರಸಭೆಯ ಮಾಜಿ ಉಪಾಧ್ಯಕ್ಷ ಅರುಣ್ ಕುಮಾರ್ ಮಾತನಾಡಿ, ಅಂಬೇಡ್ಕರ್ ಜಯಂತಿಯ ಅವ್ಯವಸ್ಥೆ ಮಾಸುವ ಮುನ್ನವೇ ಬಸವ ಜಯಂತಿಗೂ ನಿರ್ಲಕ್ಷ್ಯ ತೋರಲಾಗಿದೆ. ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಹೋರಾಟ ತೀವ್ರಗೊಳ್ಳಲಿದೆ ಎಂದು ಹೇಳಿದರು. ಮಹಾಸಭಾ ಅಧ್ಯಕ್ಷ ಎ.ಎಸ್.ಬಸವರಾಜು, ಮಹಿಳಾ ಘಟಕದ ಅಧ್ಯಕ್ಷೆ ವಿಂಪು ಸಂತೋಷ್, ರಾಷ್ಟ್ರೀಯ ಉಪಾಧ್ಯಕ್ಷೆ ಬಿ.ಕೆ.ಚಂದ್ರಕಲಾ ಸೇರಿ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ಪುನಶ್ಚೇತನಗೊಳಿಸುವ ಪ್ರಯತ್ನ

» ಮೊದಲನೇ ಪುಟದಿಂದ

**ದೂರವಾಗದ ಆತಂಕ, ಗೊಂದಲ**

ಈಗಾಗಲೇ ಕೈಸುಟ್ಟಿಕೊಂಡಿರುವ ರೈತರು ಪುನಃ ಆಲೂಗೆಡ್ಡೆ ಬೆಳೆಯಬೇಕೋ ಬೇಡವೋ ಎಂಬ ಚಿಂತೆಯಲ್ಲಿದ್ದಾರೆ. ಗುಣಮಟ್ಟದ ಬಿತ್ತನೆ ಬೀಜ ಸಿಗುತ್ತದೆಯೋ ಇಲ್ಲವೊ, ಔಷಧ, ರಸಗೊಬ್ಬರ ದುಬಾರಿಯಾಗುವ ಆತಂಕವೂ ಎದುರಾಗಿದೆ. ಹೀಗಾಗಿ ಪುನಃ ಆಲೂಗೆಡ್ಡೆ ಬಗ್ಗೆ ರೈತರ ಗೊಂದಲ ದೂರವಾಗಿಲ್ಲ. ಸದ್ಯಕ್ಕೆ ಸ್ವಅನುಭವಕ್ಕಿಂತ ಅಧಿಕಾರಿಗಳ ಭರವಸೆ ಮಾತುಗಳನ್ನು ನಂಬಿಕೊಳ್ಳುವ ಸ್ಥಿತಿಯಲ್ಲಿಯೂ ರೈತರು ಇಲ್ಲ.

**ಜೋಳಕ್ಕೆ ಪರ್ಯಾಯ ಬೆಳೆಯತ್ತ ಚಿತ್ತ:** ಜಿಲ್ಲೆಯಲ್ಲಿ ಪ್ರಸ್ತುತ ಹೆಚ್ಚಾಗಿ ಜೋಳವನ್ನು ಬೆಳೆಯಲಾಗುತ್ತಿದೆ. ಕಳೆದ ಬಾರಿ ರೋಗ ಕಾಣಿಸಿಕೊಂಡಿದ್ದರಿಂದ ಹೆಚ್ಚಿನ ಪ್ರಮಾಣದ ರೈತರು ನಷ್ಟ ಹೊಂದಿದ್ದರು. ಆದ್ದರಿಂದ ಕೃಷಿ ಇಲಾಖೆ ಅಧಿಕಾರಿಗಳು ಜೋಳದ ಬದಲು ಪರ್ಯಾಯ ಬೆಳೆಯತ್ತ ಗಮನ ಹರಿಸುವಂತೆ ಸಲಹೆ ನೀಡಿದ್ದಾರೆ. ಆದ್ದರಿಂದ ಈ ಬಾರಿ ರೈತರು ಮುಸುಕಿನ ಜೋಳದ ಬದಲಾಗಿ ಆಲೂಗೆಡ್ಡೆಯನ್ನು ಬೆಳೆಲು ಆಸಕ್ತಿ ತೋರಿದಂತೆ ಕಾಣುತ್ತಿದೆ.

## ಅಶ್ವಾರೂಢ ಬಸವೇಶ್ವರರ ಕಂಚಿನ ಪ್ರತಿಮೆ ಲೋಕಾರ್ಪಣೆ

» ಮೊದಲನೇ ಪುಟದಿಂದ

ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಬಸವಣ್ಣನವರು ಕಲಿಯುಗದ ದೈವಾಂಶ ಸಂಭೂತರು. ಅವರ ವಚನಗಳು ನನ್ನ ರಾಜಕೀಯ ಜೀವನಕ್ಕೆ ದಾರಿದೀಪ. ಅವರ ತತ್ವಗಳನ್ನು ಅಳವಡಿಸಿಕೊಂಡು ಜನಸೇವೆ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ. ಯಾವುದೇ ಸಮುದಾಯಕ್ಕೂ ಅನ್ಯಾಯವಾಗದಂತೆ ಸಮಾನತೆ ಆಧಾರಿತ ಆಡಳಿತ ನಡೆಸುತ್ತಿದ್ದೇನೆ. ಕ್ಷೇತ್ರದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸುವಂತೆ ಕರೆ ನೀಡಿದರು.

ಕಡೂರು ಯಳನಡು ಮಠದ ಶ್ರೀ ಜ್ಞಾನಪ್ರಭು ಸಿದ್ದರಾಮದೇಶಿ ಕೇಂದ್ರ ಸ್ವಾಮೀಜಿ, ಕೋಳಗುಂದ ಕೇದಿಗೆ ಮಠದ ಶ್ರೀ ಜಯಚಂದ್ರಶೇಖರ ಸ್ವಾಮೀಜಿ, ಕೋಡಿಮಠದ ಶ್ರೀ ಚೇತನ್ ಮರಿದೇವರು, ಮಾಡಾಳು ನಿರಂಜನ ಪೀಠದ ಶ್ರೀ ರುದ್ರಮುನಿ ಸ್ವಾಮೀಜಿ, ಡಿ.ಎಂ. ಕುರ್ಕೆ ಬೂದಿಹಾಳ್ ವೀರಕ್ತ ಮಠದ ಶಶಿಶೇಖರ ಸಿದ್ದಬಸವ ಸ್ವಾಮೀಜಿ ಸೇರಿ ಅನೇಕ ಮಠಾಧೀಶರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಂಸದ ಶ್ರೇಯಸ್ ಪಟೇಲ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬಿ.ಎಸ್. ಅರುಣಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್ ಅವರು ಮಾತನಾಡಿದರು. ವಿವಿಧ ಜನಪ್ರತಿನಿಧಿಗಳು, ಮುಖಂಡರು, ಸಂಘ-ಸಂಸ್ಥೆಗಳ ಪದಾಧಿಕಾರಿ ಗಳು ಹಾಗೂ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.

**ವಿಶೇಷ ಪೂಜೆ:** ಅರ್ಚಕರಾದ ಶಿವಗುರು ಶಾಸ್ತ್ರಿ ಅವರ ನೇತೃತ್ವದಲ್ಲಿ ಶ್ರೀ ಜೇನುಕಲ್ಲು ಸಿದ್ದೇಶ್ವರ ಸ್ವಾಮಿ, ಗ್ರಾಮ ದೇವತೆಗಳಾದ ಶ್ರೀಕರಿಯಮ್ಮ, ಶ್ರೀ ಮಲ್ಲಗೆಮ್ಮ, ಧೂತರಾಯ ಹಾಗು ಚಲುವರಾಯ ಸ್ವಾಮಿಗಳಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು.

## ಗೊಡ್ಡು ಸಂಪ್ರದಾಯಗಳ ವಿರುದ್ಧ ಹೋರಾಡಿದ ಬಸವಣ್ಣ

» ಮೊದಲನೇ ಪುಟದಿಂದ

ಜೀವನ ಮಾಡಲು ಕಳ್ಳತನ ಮಾಡಬೇಕಾ, ಕೊಲ್ಲಬೇಕಾ, ಹಿಂಸಿಸಿ, ಮೋಸ ಮಾಡಬೇಕಾ ಎಂದು ಬಸವಣ್ಣ ಪ್ರಶ್ನಿಸಿದ್ದಾರೆ. ಜೀವನವನ್ನು ಸರಿ ದಾರಿಯತ್ತ ಕೊಂಡೊಯ್ಯಲು ಬಸವಣ್ಣ ಅವರ ವಚನಗಳು ನಮಗೆ ನೆರವಾಗುತ್ತವೆ. 800 ವರ್ಷದ ಹಿಂದಿನ ಶರಣ ಸಂಪ್ರದಾಯವನ್ನು ನಾವು ಪಾಲಿಸಿದರೆ ಇಂತಹ ಕಾರ್ಯಕ್ರಮ ಸಾರ್ಥಕವಾಗಲಿದೆ. ಬಸವ ತತ್ವಗಳು ಎಂದೆಂದಿಗೂ ಶಾಶ್ವತ ಎಂದು ಜಿಲ್ಲಾಧಿಕಾರಿ ಗುಣಗಾನ ಮಾಡಿದರು.

ನಿವೃತ್ತ ಪ್ರಾಂಶುಪಾಲ ಶಿವಶಂಕರ್ ಅವರು ಮಾತನಾಡಿ, ತಾತ್ವಿಕ ತಳಹದಿಯ ಮೇಲೆ ಸಾತ್ವಿಕ ಸಮಾಜ ಕಟ್ಟಿಕೊಟ್ಟವರು ಬಸವಣ್ಣ. ಸಮ ಸಮಾಜ ನಿರ್ಮಾಣ ಮಾಡಿ, ಕೆಟ್ಟು ಹೋಗಿದ್ದ ವ್ಯವಸ್ಥೆಯನ್ನು ಸರಿಪಡಿಸಿದರು ಎಂದರು.

ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ಬಸವ ಜಯಂತಿಗೆ ಎಷ್ಟು ಶಕ್ತಿ ಎಂಬುದಕ್ಕೆ ಇಂದು ನಡೆಯುತ್ತಿರುವ ವಿವಿಧ ಶುಭ ಸಮಾರಂಭಗಳು ಸಾಕ್ಷಿ. ಬಸವಣ್ಣ ಅವರ ತತ್ವ ಸಿದ್ಧಾಂತ ಎಲ್ಲೆಡೆಗೂ ವ್ಯಾಪಿಸಿದೆ ಎಂದರೆ ಏನೇ ಶುಭ ಕಾರ್ಯ ಮಾಡಬೇಕೆಂದರೂ ಬಸವ ಜಯಂತಿ ಇರಲಿ ಅಂತಾರೆ. ಕಲ್ಯಾಣ ಮಂಟಪ, ಪ್ರಜಾಪ್ರಭುತ್ವ, ಮೀಸಲಾತಿಯ ತಳಹದಿಯೇ ಬಸವಣ್ಣ. ಅಂದು ಬಸವಣ್ಣ ಅವರು ಪ್ರಜಾಪ್ರಭುತ್ವಕ್ಕೆ ಕೊಟ್ಟಿದ್ದ ಶಕ್ತಿಯನ್ನು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನೀಡಿದರು ಎಂದು ವ್ಯಾಖ್ಯಾನಿಸಿದರು.

ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಮುಖಂಡರಾದ ಬಿ.ಪಿ.ಐಸಾಮಿಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಯು.ಎಸ್.ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ.ತಾರಾನಾಥ್ ಹಾಗು ಮುಂತಾದವರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಬಸವೇಶ್ವರ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಗೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಚಾಲನೆ ನೀಡಿದರು.

## ಬೇಡರ ಜಗಲಿಯಲ್ಲಿ ಅಂಬೇಡ್ಕರ್ ಜಯಂತಿ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬೇಡರ ಜಗಲಿ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಉಪನ್ಯಾಸಕ ಕುಶಲ್ ಅವರು ಮಾತನಾಡಿ, ಅಂಬೇಡ್ಕರ್ ಅವರ ಜೀವನ ಹಾಗು ಹೋರಾಟ ಜೊತೆಗೆ ಸಾಂಸ್ಕೃತಿಕ ಹಾಗು ಸಂಸ್ಕಾರದ ಮೌಲ್ಯದೊಂದಿಗೆ ಬೆಳೆದ ಅಂಬೇಡ್ಕರ್ ಅವರ ಸುಧೀರ್ಘ ಜೀವನ ಒಂದು ಪರಿಪೂರ್ಣವಾದದ್ದು. ಅವರ ನಡೆ ನುಡಿ ಪ್ರತಿಯೊಬ್ಬರಿಗೂ ಮಾದರಿಯಾದೆ. ಪ್ರತಿ ತಂದೆ-ತಾಯಿಯರು ಮಕ್ಕಳನ್ನು ಆ ರೀತಿ ಬೆಳೆಸಬೇಕು. ಜಾತಿ ವ್ಯವಸ್ಥೆಯ ಸಮಾಜದೊಳಗೆ ಜಾತಿಯನ್ನು ತಿಳಿದುಕೊಂಡು ಬದುಕುವುದು ಬಹು ಮುಖ್ಯವಾದದು ಎಂದು ತಿಳಿಸಿದರು.

ಶಿಕ್ಷಕಿ ಮಲ್ಲಿಗೆಯಮ್ಮ ಅವರು ಬಾಬಾ ಸಾಹೇಬ್ ಅಂಬೇಡ್ಕರ್ ಮಹಿಳೆಯರಿಗೆ ನೀಡಿದ ಹಕ್ಕು ಅಧಿಕಾರ ಮತದಾನದ ಹಾಗು ಸಾಂವಿಧಾನಿಕ ಮೌಲ್ಯ ಬಗ್ಗೆ ತಿಳಿಸಿಕೊಟ್ಟರು.

ಉಪನ್ಯಾಸಕ ರಾಜಶೇಖರ್ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮದ ರೂಪರೇಷೆ, ಅಂಬೇಡ್ಕರ್ ಅವರ ಪಾಲಿಸಿದ ವಿದ್ಯೆ, ಸ್ವಾಭಿಮಾನದ ಬಗ್ಗೆ ತಿಳಿಸಿಕೊಟ್ಟರು. ಮುಖಂಡರಾದ ಶಾಂತರಾಜ್ ಅಧ್ಯಕ್ಷತೆ ವಹಿಸಿದರು. ಸೋಮಣ್ಣ, ಮನೋಜ್, ಶಶಾಂಕ್ ಹಾಗು ಕಲ್ಲನಕೋಡಿ, ಬ್ಯಾಡರ ಜಗಲಿ, ಕೆಳಹಟ್ಟಿ ಗ್ರಾಮಸ್ಥರು ಹಾಜರಿದ್ದರು.

# ವಿಶ್ವಕ್ಕೆ ಸಮಾನತೆಯ ಸಂದೇಶ ಸಾರಿದ ಬಸವಣ್ಣ

• ಪ್ರಜೋದಯ ವರದಿ

**ಹಾಸನ:** ವಿಶ್ವಗುರು ಬಸವಣ್ಣ ಅವರು ಜಾತಿ ತಾರತಮ್ಯ ತೊಡೆದು ಹಾಕುವ ಉದ್ದೇಶದಿಂದ ನಿರಂತರ ಹೋರಾಟ ಮಾಡಿ ಸಮಾನತೆಯ ಸಂದೇಶ ಸಾರಿದ ಶ್ರೇಷ್ಠ ದಾರ್ಶನಿಕ ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ಅವರು ಹೇಳಿದರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬಸವೇಶ್ವರ ಜಯಂತಿಯಲ್ಲಿ ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವೇಶ್ವರರು ಎಲ್ಲಾ ಸಮಾಜದವರನ್ನು ಒಗ್ಗೂಡಿಸುವ ಕೆಲಸ ಮಾಡಿದ್ದಾರೆ. ಜಾತಿ, ವರ್ಗ, ವರ್ಣ, ಲಿಂಗ ಬೇಧವನ್ನು ತೊಡೆದುಹಾಕಿ ಎಲ್ಲರೂ ಸಮಾನರು ಎಂಬ ಸಂದೇಶ ಸಾರಿದ್ದಾರೆಂದರು.

ಸರ್ವರು ಸಮನಾಗಿ ಬದುಕಬೇಕು. ಸಾಮಾಜಿಕ ಹಾಗು ಆರ್ಥಿಕವಾಗಿ ಹಿಂದುಳಿದವರಿಗೆ ಸಮಾನ ಆದ್ಯತೆ ಸಿಗಬೇಕು. ಮಹಿಳೆಯರಿಗೂ ಸಹ ಎಲ್ಲರಂತೆ ಸ್ವಾತಂತ್ರ್ಯ ಇರಬೇಕೆನ್ನುವುದು ಬಸವಣ್ಣ ಅವರ ಆಶಯವಾಗಿತ್ತು. ಅನುಭವ ಮಂಟಪ ಸ್ಥಾಪಿಸಿ ಪ್ರಜಾಪ್ರಭುತ್ವದ ಸಂದೇಶವನ್ನು ವಿಶ್ವಕ್ಕೆ ಸಾರಿದ ಕೀರ್ತಿ ಬಸವಣ್ಣ ಅವರಿಗೆ ಸಲ್ಲುತ್ತದೆಂದರು.



ಪ್ರಾಂಶುಪಾಲ ಡಾ.ಹೆಚ್.ಜೆ.ಅಮರೇಂದ್ರ ಅವರು ಮಾತನಾಡಿ, ಶರಣ ತತ್ವ ಪ್ರತಿಪಾದನೆಯಿಂದ ಸಮಾಜದಲ್ಲಿ ಬದಲಾವಣೆ ತಂದವರು ಬಸವಣ್ಣ. ಮೂಢ ನಂಬಿಕೆಗಳನ್ನು ತೊಡೆದು, ಸತ್ಯ ನೀತಿ ಸದ್ಗುಣಗಳನ್ನು ಅಳವಡಿಸಿಕೊಳ್ಳಲು ವಚನಗಳ ಮೂಲಕ ಸರಳ ಕನ್ನಡದಲ್ಲಿ ಜನ ಸಾಮಾನ್ಯರು ತಿಳಿಯುವ ರೀತಿ ಪ್ರಸ್ತುತಪಡಿಸಿದ್ದಾರೆ. ಸಮ ಸಮಾಜ ನಿರ್ಮಾಣ ಮಾಡುವಲ್ಲಿ ಕನಸು ಕಂಡರು ಎಂದರು.

ನಿವೃತ್ತ ಪ್ರಾಂಶುಪಾಲ ಡಾ.ಎ.ಜೆ.ಕೃಷ್ಣಯ್ಯ ಅವರು ಮಾತನಾಡಿ, ಶ್ರೀ ಬಸವಣ್ಣ ಅವರ ತತ್ವಗಳು ಇಂದಿಗೂ ಅವರ ಆಡಳಿತ ನೀತಿಗಳು ಜಾರಿಗೆ ತಂದಲ್ಲಿ ಇನ್ನು ಹೆಚ್ಚು ಬದಲಾವಣೆ ತರಬಹುದು. ಹಿಂದುಳಿದ ವರ್ಗದವರನ್ನು ಮೇಲ್ಮಟ್ಟಕ್ಕೆ ತರಲು ಬಹಳಷ್ಟು ಶ್ರಮಿಸಿದ ಕೀರ್ತಿ ಬಸವಣ್ಣ. ಮಹಿಳೆಯರಿಗೆ ಗೌರವ ಸಿಗುವಂತೆ ಮಾಡಿದರು. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದರು ಎಂದರು.

ಕಾಲೇಜು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದ್ರ ಬಹುದ್ದೂರ್, ಪರೀಕ್ಷಾ ವಿಭಾಗದ ಮುಖ್ಯಸ್ಥ ಡಾ.ಎ.ಎ.ಪ್ರಸನ್ನ, ಎನ್‌ಎಸ್‌ಎಸ್ ಅಧಿಕಾರಿ ಡಾ.ವಿಜಯ್ ಕುಮಾರ್, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಮಾಧ್ಯಮ ಸಂಯೋಜಕ ಕಟ್ಟಾಯ ಶಿವಕುಮಾರ್, ಡಾ.ಮಧು, ಪ್ರಾಧ್ಯಾಪಕರಾದ ಡಾ.ರಮೇಶ್, ಬಿ.ಬಿ.ನಿಲಕಂಠಪ್ಪ, ಡಾ. ಶಶಿಧರ್, ಕಾಲೇಜಿನ ಅಧೀಕ್ಷಕ ಶಿವಪ್ಪ ನಾಯಕ, ವೀರೇಶ್, ಶಂಕರ್, ಕುಮಾರ್ ಇತರರಿದ್ದರು.

## ಆಟೋ ಚಾಲಕನ ಮಗಳಿಗೆ 585 ಅಂಕ

• ಪ್ರಜೋದಯ ವರದಿ

**ಹಾಸನ:** ಕಡುಬಡತನದಲ್ಲಿ ಓದಿದ ಆಟೋ ಚಾಲಕನ ಮಗಳು ದ್ವಿತೀಯ ಪಿಯು ಪರೀಕ್ಷೆ ಯಲ್ಲಿ 600ಕ್ಕೆ 585 ಅಂಕ ಪಡೆದಿದ್ದು ಆಟೋ ಚಾಲಕರ ಸಂಭ್ರಮಕ್ಕೆ ಕಾರಣರಾಗಿದ್ದಾರೆ.



ಸಾಲಗಾಮೆಯ ಕುಮಾರ್ ಹಾಗು ಲತಾ ಅವರ ಪುತ್ರಿ ಎಸ್.ವಿ.ಯಶು ನಗರದ ಎಪಿಜೆ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ 585 ಅಂಕ ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ನಗರದ ಆರ್.ಸಿ.ರಸ್ತೆ ವೃತ್ತದಲ್ಲಿರುವ ಶ್ರೀ ಶಿವಕುಮಾರ ಸ್ವಾಮೀಜಿ ಆಟೋ ಚಾಲಕರು ಹಾಗು ಮಾಲೀಕರ ಸಂಘದಿಂದ ವಿದ್ಯಾರ್ಥಿನಿಗೆ ಸೋಮವಾರ ಸನ್ಮಾನಿಸಲಾಯಿತು.

ವಿದ್ಯಾರ್ಥಿನಿಯ ತಂದೆ ಕುಮಾರ್ ಅವರು ಮಾತನಾಡಿ, 1995 ರಿಂದ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಆರ್ಥಿಕವಾಗಿ ಕುಟುಂಬ ಸದೃಢವಾಗಿಲ್ಲವಾದರೂ ಕಷ್ಟಪಟ್ಟು ದುಡಿದು ಮಗಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದ್ದೇನೆ. ಅವಳು ಸಹ ನಮ್ಮ ಭರವಸೆ ಹುಸಿಯಾಗದಂತೆ ಉತ್ತಮ ಅಂಕ ಗಳಿಸಿದ್ದಾಳೆ. ನನ್ನ ಮಗಳ ಏಳಿಗೆಯಲ್ಲಿ ಆಟೋ ಚಾಲಕ ಸ್ನೇಹಿತರ ಸಹಕಾರವೂ ಹೆಚ್ಚಿದೆ ಎಂದು ಭಾವುಕರಾದರು.

ವಿದ್ಯಾರ್ಥಿನಿ ಎಸ್.ವಿ.ಯಶು ಅವರು ಮಾತನಾಡಿ, ನಿರಂತರ ಪರಿಶ್ರಮ ಹಾಗು ತಾಳ್ಮೆ ಇದ್ದರೆ ಜೀವನದಲ್ಲಿ ಯಶಸ್ಸು ಗಳಿಸಬಹುದು. ಮನೆಯಲ್ಲಿ ಯಾವುದೇ ಸಮಸ್ಯೆಯಾಗದಂತೆ ತಂದೆ-ತಾಯಿ ನೋಡಿಕೊಂಡರು. ಕಷ್ಟಗಳ ನಡುವೆಯೂ ನನ್ನ ವಿದ್ಯಾಭ್ಯಾಸಕ್ಕೆ ಯಾವ ಕೊರತೆಯಾಗದಂತೆ ಸಹಕರಿಸಿದರು. ಅವರ ನೆರವಿನಿಂದ ಇಷ್ಟೆಲ್ಲಾ ಸಾಧ್ಯವಾಗಿದೆ. ಬಿಎಸ್‌ಸಿ (ಅಗ್ರಿ) ಪದವಿ ಮಾಡುವ ಗುರಿ ಹೊಂದಿದ್ದೇನೆಂದು ತಿಳಿಸಿದರು.

ಯಶು ಅವರ ತಾಯಿ ಲತಾ, ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಗೌರವಾಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ವಸಂತ್, ಜಾನಿ, ಮೋಹನ್, ಅಬ್ಬಾಸ್ ಇತರರಿದ್ದರು.

## ಶ್ರೀ ಕಾಡುಬಸವೇಶ್ವರ ದೇವಾಲಯದಲ್ಲಿ ಬಸವ ಜಯಂತಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮದ ವೀರಶೈವ ಸಮಾಜದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಕಾಡುಬಸವೇಶ್ವರ ಹಾಗೂ ಸಂಕೋಲೆ ಬಸವೇಶ್ವರ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಉತ್ಸವದೊಂದಿಗೆ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಗ್ರಾಮದ ಪೇಟೆ ಬೀದಿಯಲ್ಲಿರುವ ಶ್ರೀ ಸಂಕೋಲೆ ಬಸವೇಶ್ವರ ಸ್ವಾಮಿ ದೇವಾಲಯದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಅಭಿಷೇಕ ಹೂವಿನ ಅಲಂಕಾರ ಸೇರಿ ವಿವಿಧ ಪೂಜೆಗಳು ನೆರ ವೇರಿದವು. ನಂತರ ಶ್ರೀ ಬಸವೇಶ್ವರ ಸ್ವಾಮಿ ಹಾಗೂ ಬಸವಣ್ಣನವರ ಭಾವಚಿತ್ರಗಳಿಗೆ ಹೂವಿನ ಅಲಂಕಾರದೊಂದಿಗೆ ತೆರೆದ ವಾಹನದಲ್ಲಿ ಗ್ರಾಮದ ರಾಜಭೀದಿಗಳಲ್ಲಿ ಉತ್ಸವ ನೆರವೇರಿತು.

ಹಿರೀಸಾವೆ ರಸ್ತೆಯಲ್ಲಿರುವ ಮೂಲ ಕಾಡುಬಸವೇಶ್ವರ ದೇವಾಲ ಯದಲ್ಲಿ ವಿಶೇಷ ಪೂಜೆ ಅಭಿಷೇಕಗ ಳೊಂದಿಗೆ



ಭಕ್ತರು ಪೂಜೆ ಸಲ್ಲಿಸುವ ಮೂಲಕ ಬಸವ ಜಯಂತಿ ಆಚರಿಸಿದರು.

ಗ್ರಾಮದ ಶ್ರೀ ಅರೇಕಲಮ್ಮ ದೇವಾಲಯದ ಬಸವಣ್ಣನ ಉತ್ಸವವನ್ನು ನಡೆಸಲಾಯಿತು. ವೀರಶೈವ ಸಮಾಜದ ವತಿಯಿಂದ ಸಾರ್ವಜನಿಕರಿಗೆ ಅನ್ನ ದಾಸೋಹ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು.

ಜಿಲ್ಲಾ ವೀರಶೈವ ಸಮಾಜದ ಪ್ರಧಾನ ಕಾರ್ಯದರ್ಶಿ ಕೃಪಾ ಶಂಕರ್, ಹೋಬಳಿ ಅಧ್ಯಕ್ಷ ಎನ್.ಎಸ್.ಗಿರೀಶ್, ಸಮಾಜದ ಪ್ರಮುಖರಾದ ಜಯ ಕೀರ್ತಿ, ಎನ್.ಸಿ. ಕುಮಾರಸ್ವಾಮಿ, ಎನ್.ಆರ್. ಪ್ರದೀಪ್, ಎನ್.ಪಿ. ಪ್ರದೀಪ್, ಎನ್.ಎನ್.ರುದ್ರಸ್ವಾಮಿ, ವಿರೂಪಾಕ್ಷ, ಭರತ್ ಶೆಟ್ಟಿ, ದೊಡ್ಡಗುಣಿ ವಿಜಯ್, ರಮೇಶ್, ಆನಂದ್, ಹೋಟೆಲ್ ಗುರು, ಗಣೇಶ್, ಹೋಟೆಲ್ ಮಂಜು, ತ್ರಿನೇಶ್, ರೇಣುಕಾ ಸ್ವಾಮಿ, ಪವನ್, ತಿಲಕ್, ಲೋಕೇಶ್, ಗ್ರಾಮಸ್ಥರಾದ ಅರೆ ಕಲ್ಲಮ್ಮ ದೇವಾಲಯದ ಪ್ರವೀಣ್ ಗುರೂಜಿ, ಲೋಕೇಶ್, ರಂಗಸ್ವಾಮಿ, ಮಾಸ್ಟರ್ ಶಿವಲಿಂಗಪ್ಪ ಸೇರಿ ಗ್ರಾಮದ ವೀರಶೈವ ಸಮಾಜದ ಬಂಧುಗಳು ಮತ್ತು ಗ್ರಾಮಸ್ಥರು ಪಾಲ್ಗೊಂಡಿದ್ದರು.

## ಗುಜರಾತ್ ಟೈಟನ್ಸ್‌ಗೆ 200 ರನ್ ಗುರಿ ನೀಡಿದ ಮುಂಬೈ ಇಂಡಿಯನ್ಸ್

# ತಿಲಕ್ ವರ್ಮಾ ಭರ್ಜರಿ ಶತಕ

• ಪ್ರಜೋದಯ ವರದಿ

**ಅಹಮದಾಬಾದ್:** ತಿಲಕ್ ವರ್ಮಾ ಅಮೋಘ ಶತಕದ (ಅಜೇಯ 101) ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಇಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ನಿಗದಿತ 20 ಓವರ್‌ಗಳಲ್ಲಿ ಐದು ವಿಕೆಟ್ ನಷ್ಟಕ್ಕೆ 199 ರನ್‌ಗಳ ಸವಾಲಿನ ಮೊತ್ತ ಪೇರಿಸಿದೆ.

ಸತತ ನಾಲ್ಕು ಸೋಲುಗಳಿಂದ ಕಂಗೆಟ್ಟಿರುವ ಮುಂಬೈ ತಂಡಕ್ಕೆ ಈ ಪಂದ್ಯದಲ್ಲೂ ಆರಂಭ ಉತ್ತಮವಾಗಿರಲಿಲ್ಲ. ಕಳೆದ ಪಂದ್ಯದ ಶತಕವೀರ ಕ್ವಿಂಟನ್ ಡಿಕಾಕ್ (13) ಬೇಗನೇ ನಿರ್ಗಮಿಸಿದರು. ಡ್ಯಾನಿಶ್ ಮಲೆವಾರ್ (2) ಅವರಿಂದಲೂ ಹೋರಾಟ ಮೂಡಿಬಂದಿಲ್ಲ. ಈ ನಡುವೆ 45 ರನ್‌ಗಳ ಉಪಯುಕ್ತ ಇನಿಂಗ್ಸ್ ಕಟ್ಟಿದ ನಮನ್ ಧೀರ್ ತಂಡವನ್ನು ಹಳಿಗೆ ಮರಳಿಸಿದರು. ಈ ನಡುವೆ ಸೂರ್ಯಕುಮಾರ್ ಯಾದವ್ (15) ಮತ್ತೊಮ್ಮೆ ವೈಫಲ್ಯವನ್ನು ಕಂಡರು.

**45 ಎಸೆತಗಳಲ್ಲಿ ಐಪಿಎಲ್‌ನ ಚೊಚ್ಚಲ ಶತಕ ಗಳಿಸಿದ ತಿಲಕ್**

ಮತ್ತೊಂದೆಡೆ ಐದನೇ ಕ್ರಮಾಂಕದಲ್ಲಿ



ಕ್ರೀಸಿಗಿಳಿದ ತಿಲಕ್ ವರ್ಮಾ ಆಕರ್ಷಕ ಹೊಡೆತಗಳ ಮೂಲಕ ರಂಜಿಸಿದರು. ಆ ಮೂಲಕ ಲಯಕ್ಕೆ ಮರಳಿದರು.

33 ಎಸೆತಗಳಲ್ಲಿ ಅರ್ಧಶತಕ ಗಳಿಸಿದ ತಿಲಕ್, ಕಳೆದ 15 ಪಂದ್ಯಗಳಲ್ಲಿ ರನ್ ಬರವನ್ನು ನೀಗಿಸಿದರು. ಅಲ್ಲಿಂದ ಬಳಿಕ ಹಿಂತಿರುಗಿಯೇ ನೋಡಿಲ್ಲ. ಅಂತಿಮ ಹಂತದಲ್ಲಿ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗೈದ ತಿಲಕ್ ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ 100ರ ಗಡಿ ದಾಟಿದರು.

45 ಎಸೆತಗಳಲ್ಲಿ ಶತಕ ಗಳಿಸಿದ ತಿಲಕ್ ಇನಿಂಗ್ಸ್‌ನಲ್ಲಿ ಏಳು ಸಿಕ್ಸರ್ ಹಾಗೂ ಎಂಟು ಬೌಂಡರಿಗಳು ಸೇರಿದ್ದವು. ಇನ್ನುಳಿದಂತೆ ನಾಯಕ ಹಾರ್ದಿಕ್ ಪಾಂಡ್ಯ 15 ರನ್ ಗಳಿಸಿ ಔಟ್ ಆದರು. ಗುಜರಾತ್ ಪರ ಕಗಿಸೊ ರಬಾಡ ಮೂರು ವಿಕೆಟ್ ಗಳಿಸಿದರು.



## ಹೊರ್ಮುಜ್ ಜಲಸಂಧಿ ದಾಟಿದ ಭಾರತದ 10 ಹಡಗು

• ಪ್ರಜೋದಯ ವರದಿ

**ನವದೆಹಲಿ:** ಈವರೆಗೆ 10 ಹಡಗುಗಳು ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿ ಭಾರತವನ್ನು ತಲುಪಿವೆ. ನಮ್ಮ ಹಡಗುಗಳು ಸುರಕ್ಷಿತವಾಗಿ ಹೊರಬರಲು ಇರಾನ್ ಜೊತೆ ನಿರಂತರ ಸಂಪರ್ಕದಲ್ಲಿದ್ದೇವೆಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸೋಮವಾರ ತಿಳಿಸಿದೆ.

**ಇರಾನ್ ರಾಯಭಾರಿಯೊಂದಿಗೆ ಸಭೆ**

ಇರಾನ್ ರಾಯಭಾರಿ ಹಾಗೂ ವಿದೇಶಾಂಗ ಕಾರ್ಯದರ್ಶಿಯೊಂದಿಗೆ ಸಭೆ ನಡೆಸಿದ್ದೇವೆ. ಈ ವಿಷಯವನ್ನು ಸ್ವದೇಶದಲ್ಲಿರುವ ಅಧಿಕಾರಿಗಳಿಗೆ ತಿಳಿಸುವುದಾಗಿ ರಾಯಭಾರಿ ಹೇಳಿದ್ದಾರೆಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚಿದ್ದರೂ, ಇದುವರೆಗೆ ಭಾರತದ 10 ಹಡಗುಗಳು ಹೊರ್ಮುಜ್ ಜಲಸಂಧಿ ಯನ್ನು ಯಶಸ್ವಿಯಾಗಿ ದಾಟಿವೆಂದು ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019